
# ಶ್ರೀ ಸಾಯಿ ರಕ್ಷಾ ವ್ರತ

## ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ



ಓಂ ಆತ್ಮರೂಪಾಯ ವಿದ್ಮಹೇ |

ಯೋಗಿರಾಜಾಯ ಧೀಮಹಿ |

ತನ್ನೋ ಸಾಯಿ ಪ್ರಚೋದಯಾತ್ ||

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ಸಾಯಿ ರಕ್ಷಾ ವ್ರತ

**ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**



**ವಿಶ್ವಪತಿ**
**(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)**

**SHRI DESIGNS**
**VEDIC LOGO DESIGNERS**
**www.lordofsevenhills.com**
**Cell : + 91 9849443752**
**Hyderabad**
**2021**

# ಶ್ರೀ ಸಾಯಿ ರಕ್ಷಾ ವ್ರತ

**ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© **ಸರ್ವಹಕ್ಕುಗಳು ರಚಯಿತನದು**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**

**Beside Sanghamitra School, Nizampet Road,**

**HYDERABAD – 500 085, India**

**Cell : + 91 9849443752**

**Email : viswapathi@yahoo.com, shridesigns@gmail.com**

# ಮುನ್ನುಡಿ

**ಪ್ರತ್ಯಕ್ಷದ್ಯೆವಂ ಪ್ರತಿಬಂಧನಾಶನಂ ಸತ್ಯರೂಪಮ್ ಸಕಲಾರ್ಥಿನಾಶನಂ |**
**ಸೌಖ್ಯಪ್ರದಂ ಶಾಂತಂ ಮನೋಜ್ಞಾನರೂಪಮ್ ಸಾಯಿನಾಥಮ್**
**ಸದ್ಗುರುಮ್ ಚರಣಂ ನಮಾಮಿ ||**

ಅತಿಪವಿತ್ರವಾದ ಶಿರಡಿ ಪುಣ್ಯಕ್ಷೇತ್ರದಲ್ಲಿ ತನ್ನನ್ನು ನಂಬಿದ ಭಕ್ತರನ್ನು ಕಾಪಾಡಲಿಕ್ಕಾಗಿ ಬೆಳಗಿದ ಅಮೃತಮೂರ್ತಿ ಸಾಯಿನಾಥನು. ಸಾಯಿನಾಥನನ್ನು ನಿತ್ಯ ಪೂಜಿಸುತ್ತಿರುವವರಿಗೆ ಯಾವುದೇ ಅಪಾಯಗಳು ಉಂಟಾಗುವುದಿಲ್ಲ. ಕೈಹಿಡಿದ ಕಾರ್ಯಗಳಲ್ಲಿ ಜಯವು ಉಂಟಾಗುತ್ತದೆ. ಜೀವನವು ಸರಾಗವಾಗಿ, ಶುಭಪ್ರದವಾಗಿ ಮುಂದುವರಿಯುತ್ತದೆ. ಪ್ರಪಂಚವ್ಯಾಪ್ತಿಯಾಗಿ ಕೋಟ್ಯಾಂತರ ಭಕ್ತರು ಆ ಸಾಯಿನಾಥನನ್ನು ನಿತ್ಯವೂ ಪೂಜಿಸುತ್ತಾ, ಆ ಸ್ವಾಮಿಯ ಅನುಗ್ರಹದಿಂದ ಬಹಳ ಭಾಗ್ಯವಂತರಾಗಿ ಜೀವಿಸುತ್ತಿದ್ದಾರೆ.

1983ರಲ್ಲಿ ರೀಜನಲ್ ಇಂಜಿನಿಯರಿಂಗ್ ಕಾಲೇಜು, ವಾರಂಗಲ್.ನಿಂದ ಎಂ.ಟೆಕ್. ಓದಿದ ನಾನು 1984ರವರೆಗೆ ಆಲ್ವಿನ್ ಕಂಪನಿಯಲ್ಲಿ, 1989ವರೆಗೆ ಎಂ.ವಿ.ಎಸ್.ಆರ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗವನ್ನು ಮಾಡಿದೆನು. 1983ನಲ್ಲಿ ಚಿ|| ಸೌ|| ವೆಂಕಟ ರುಕ್ಮಿಣಿ ವೈದೇಹಿಯೊಂದಿಗೆ ವಿವಾಹ. ಮೂವರು ಮಕ್ಕಳು : ಆನಂದಿ, ಆಮುಕ್ತ ಮತ್ತು ಆದಿತ್ಯ.

1998ರಿಂದ ಬಿಸಿನೆಸ್ ಸಂಸ್ಥೆಗಳಿಗೆ ವೇದಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರದ ಆಧಾರದ ಮೇಲೆ ಹೆಸರನ್ನು ನಿರ್ಣಯಿಸುವುದು, ಲೋಗೋ ಡಿಸೈನ್.ಗಳನ್ನು ಮಾಡುವುದರಲ್ಲಿ ತೊಡಗಿಕೊಂಡಿದ್ದೇನೆ. ಇಲ್ಲಿಯವರೆಗೆ ನಾನು ಲೋಗೋ ಡಿಸೈನ್.ಗಳನ್ನು ಮಾಡಿಕೊಟ್ಟಂತಹ 5,000ಕ್ಕೂ ಹೆಚ್ಚಿನ ಸಂಸ್ಥೆಗಳು ದೇಶ, ವಿದೇಶಗಳಲ್ಲಿ ಪ್ರಮುಖ ಸ್ಥಾನದಲ್ಲಿದೆ ಎಂದರೇ ಅದೆಲ್ಲಾ ಆ ಶ್ರೀ ಶ್ರೀನಿವಾಸನ ಅನುಗ್ರಹವಲ್ಲದೇ ಮತ್ತಿನ್ನೇನು ಅಲ್ಲ.

ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ, ನಾನು ಇಲ್ಲಿಯವರೆಗೆ ಆ ಸ್ವಾಮಿಯ ಲೀಲೆಗಳ ಮೇಲೆ ಹದಿನಾರು ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಈ ಪುಸ್ತಕಗಳನ್ನು ದೇಶ ವಿದೇಶಗಳಲ್ಲಿರುವ ಭಕ್ತರು ನಿತ್ಯ ಪಠಿಸುತ್ತಿರುವುದು ಆ ಸ್ವಾಮಿಯ ಅನುಗ್ರಹವೇ ಆಗಿದೆ. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರಿಗೂ ಅನೇಕ ಶುಭಗಳು ಲಭಿಸುತ್ತವೆ. ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ ಇವರೆಲ್ಲರೂ ತುಂಬಾ ಸುಖವಾಗಿ ಜೀವಿಸುತ್ತಿದ್ದಾರೆ. ಈ ರಚಿಸಿದ ಪುಸ್ತಕಗಳಲ್ಲಿ ಶ್ರೀ ವೇಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ, ಶ್ರೀ ಆನಂದ ಆಂಜನೇಯ, ಶ್ರೀ ಮಹೇಶ್ವರ ವ್ರತ, ಶ್ರೀ ಸುಬ್ರಹ್ಮಣ್ಯ ವ್ರತ - ಭಕ್ತರನ್ನು ಬಹಳ ಆನಂದಪಡಿಸುತ್ತಿವೆ. ಈ ಐದು ವ್ರತವನ್ನು ನಿತ್ಯವೂ ಅನೇಕ ಭಕ್ತರ ಮನೆಗಳಲ್ಲಿ, ಅನೇಕ ದೇವಾಲಯಗಳಲ್ಲಿ ಆಚರಿಸಲ್ಪಡುತ್ತಿವೆ. ಇದಕ್ಕೆ ಮಿಗಿಲಾದ ಭಾಗ್ಯವೇನಿದೆ?

ತುಂಬಾ ಸಮಯದಿಂದ, ಸಾಯಿನಾಥನ ಅನೇಕ ಮಂದಿ ಭಕ್ತರು ನನ್ನನ್ನು ಸಾಯಿ ವ್ರತವನ್ನು ರಚಿಸಬೇಕೆಂದು ಹೇಳುತ್ತಿದ್ದರು. ಆದರೆ, ಆ ಭಗವಂತನಿಗೆ ಸಂಬಂಧಿಸಿದ ಯಾವುದೇ ಪುಸ್ತಕಕ್ಕಾದರೂ ಆ ದೇವರ ಅನುಗ್ರಹವಾಗದೇ ಬರೆಯಲಾಗುವುದಿಲ್ಲವೆಂದು ನನ್ನ ನಂಬಿಕೆ. ನಾನು ಬರೆದ ಪ್ರತಿ ಪುಸ್ತಕದ ಹಿಂದೆ ಪ್ರತ್ಯಕ್ಷವಾಗಿ ಈ ವಿಷಯವನ್ನು ಅನುಭವಿಸಿದ್ದೇನೆ.

ಇಷ್ಟುದಿನಗಳಿಗೆ ಆ ಸಾಯಿನಾಥನ ಕೃಪೆಯಿಂದ ಈ ಪುಸ್ತಕವನ್ನು ರಚಿಸುವುದು ಸಾಧ್ಯವಾಯಿತು. ಈ ಶ್ರೀ ಸಾಯಿರಕ್ಷಾ ವ್ರತವನ್ನು ಬರೆಯುವ ಮುಂದಿನ ದಿನಗಳಲ್ಲಿ ಅನೇಕ ಅದ್ಭುತಗಳನ್ನು ಗಮನಿಸಿದೆನು. ಸರತಿಯಾಗಿ ಐದು ದಿನಗಳು ಸಾಯಿನಾಥನ ಭಕ್ತರು ಯಾರೋ ಒಬ್ಬರು ಬರುವುದು, ಸಾಯಿನಾಥನ ಮೇಲೆ ಪುಸ್ತಕವನ್ನು ಯಾವಾಗ ರಚಿಸುತ್ತೀರೆಂದು ಕೇಳುವುದಾಯಿತು. ಅಷ್ಟೇ! ಅನಂತರ, ಎರಡು ದಿನಗಳಲ್ಲೇ ಈ 'ಶ್ರೀ ಸಾಯಿರಕ್ಷಾ ವ್ರತ' ರಚಿಸುವುದು ಸಾಧ್ಯವಾಯಿತು. ಈ ಪುಸ್ತಕವನ್ನು ಬರೆಯುತ್ತಿರುವಷ್ಟು ಹೊತ್ತು ಆ ಸಾಯಿನಾಥನೇ ನನ್ನಿಂದ ಬರೆಸುತ್ತಿದ್ದಾನೆಂಬ ಅನುಭವಾಯಿತು. ಕಣ್ಣಿನ ಮುಂದೆ ಈ ಸಂಘಟನೆಗಳೆಲ್ಲಾ ಕಾಣಿಸಲಾರಂಭಿಸಿತು. ಅದುವೇ ಈ ವಿಧವಾಗಿ ವ್ರತಕಥೆಗಳ ರೂಪದಲ್ಲಿ ಅಕ್ಷರ ರೂಪ ಹೊಂದಿತು. ಪ್ರತಿ ಅಕ್ಷರವು ಆ ಸಾಯಿನಾಥನ ಅನುಗ್ರಹವಲ್ಲದೆ ಮತ್ತೇನಲ್ಲ. ಈ ವ್ರತವನ್ನು ಆಚರಿಸಿದ ಪ್ರತಿಯೊಬ್ಬರಿಗೂ ಆ ಸಾಯಿನಾಥನ ಅನುಗ್ರಹವು ತಪ್ಪದೆ ಉಂಟಾಗುತ್ತದೆಂದು ನನ್ನ ನಂಬಿಕೆ.

ಸಾಯಿನಾಥನು ಅತ್ಯಂತ ಪ್ರೇಮಮೂರ್ತಿ. ನಮಗಿರುವ ಕಷ್ಟನಷ್ಟಗಳು, ನಮ್ಮ ತೊಂದರೆಗಳೆಲ್ಲ ಆ ಸ್ವಾಮಿಗೆ ತಿಳಿದಿದೆ. ಅದಕ್ಕಾಗಿ ಭಕ್ತರ ಮೇಲೆ ಕರುಣೆತೋರಿ ಇಂಥಹ ಸುಲಭವಾದ ವ್ರತ ವಿಧಾನವನ್ನು ನಮಗೆ ಅನುಗ್ರಹಿಸಿದ್ದಾನೆ. ಯಾರಾದರೂ, ಯಾವಾಗಲಾದರೂ, ಬಹಳ ಸುಲಭವಾಗಿ ಆಚರಿಸುವ ಈ ವ್ರತವಿಧಾನವನ್ನು ನಮಗೆ ಅನುಗ್ರಹಿಸಿದ್ದಾನೆ. ನಮ್ಮೆಲ್ಲರ ಮೇಲೆ ತನ್ನ ಅಪಾರ ಕರುಣಾಕಟಾಕ್ಷಗಳನ್ನು ಹರಡಲು, ಆ ಸಾಯಿನಾಥನು ಇಂಥಹ ಸುಲಭ ವ್ರತವಿಧಾನವನ್ನು ಅನುಗ್ರಹಿಸಿದ್ದಾನೆಂದು ನನ್ನ ನಂಬಿಕೆ.

ಈ ಪುಸ್ತಕದ ರಚನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಪ್ರತೀಯೊಬ್ಬರಿಗೂ, ಈ ವ್ರತವನ್ನು ಆಚರಿಸಿರುವ ತಮಗೂ, ವ್ರತಕಥೆಯನ್ನು ಹೇಳಿದವರಿಗೂ, ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಸಕಲ ಸೌಭಾಗ್ಯ, ಆಯುರಾರೋಗ್ಯಗಳನ್ನು ಅನುಗ್ರಹಿಸಬೇಕೆಂದು ಆ ಸಾಯಿನಾಥನನ್ನು ಪ್ರಾರ್ಥಿಸುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||
|| ಶ್ರೀ ಸಾಯಿನಾಥ ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

*******

# ಈ ವ್ರತವನ್ನು ಹೇಗೆ ಆಚರಿಸಬೇಕು?

- ಈ ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ ಪಠಿಸಿದರೆ ಮತ್ತಷ್ಟು ಶುಭಪ್ರದ. ಗುರುವಾರದ ದಿನ ಪಠಣಮಾಡಿದರೆ ಅತ್ಯಂತ ಶುಭಪ್ರದ. ಜನ್ಮ ಜನ್ಮದ ಪಾಪಗಳು ನಶಿಸುತ್ತವೆ. ಬಹಳ ಪುಣ್ಯವು ಲಭಿಸುತ್ತದೆ. ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಈ ವ್ರತವನ್ನು ಆಚರಿಸುವ ಮೊದಲು ಒಂದುಬಾರಿ ಮನಸ್ಸಿನಲ್ಲೇ ಶ್ರೀ ವಿನಾಯಕನಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ನಕ್ಷತ್ರ ಮತ್ತು ಗೋತ್ರವನ್ನು ಮನಸ್ಸಿನಲ್ಲೇ ಸ್ಮರಿಸಿ ವ್ರತವನ್ನು ಪ್ರಾರಂಭಿಸಬೇಕು. ಶ್ರೀ ಸಾಯಿನಾಥ ಅಷ್ಟೋತ್ತರ ನಾಮಗಳನ್ನು ಪಠಿಸಬೇಕು. ಶ್ರೀ ದೇವರ ಅಂಗ ಪೂಜೆಮಾಡಿ ನಂತರ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ ದೇವರಿಗೆ ನಿಮ್ಮ ಯೋಗ್ಯತಾನುಸಾರ ಯಾವುದಾದರು ಹಣ್ಣು ಸಮರ್ಪಿಸಬೇಕು.

- ಈ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮವಿಲ್ಲ. ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ, ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು. ಅನುಕೂಲವಾದರೆ ಇಬ್ಬರೊಟ್ಟಿಗೆ ಆಚರಿಸಬಹುದು.

- ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಮಹಿಳೆಯರು ಕೂಡ ನೀರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶಾಂತಿ ಉಂಟಾಗುತ್ತದೆ.

- ಪ್ರತಿ ಗುರುವಾರದ ದಿನ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ, ಸ್ವಾಮಿಗೆ ಬಾಳೆಹಣ್ಣು ಅಥವಾ ಪೇರಳೆಹಣ್ಣನ್ನು ನೈವೇದ್ಯವಿಟ್ಟು, ಸ್ವೀಕರಿಸಿದರೆ ಯಾವುದೇ ರೀತಿಯ ಅನಾರೋಗ್ಯವಾದರೂ ಕೂಡಲೆ ವಾಸಿಯಾಗುತ್ತದೆ. ಯಾವುದೇ ರೀತಿಯ ಆಪತ್ತುಗಳು ಉಂಟಾಗುವುದಿಲ್ಲ. ಅಪಮೃತ್ಯು ಭಯವು ಇರುವುದಿಲ್ಲ. ಕಥೆಗಳನ್ನು ಓದಲು ಶಕ್ತಿಯಿಲ್ಲದವರಿಗೆ, ಅವರ ಬಂಧುಬಳಗದವರು ಯಾರಾದರೂ ಓದಿ, ಕೇಳಿಸಿದರೆ, ಮಹಾಫಲವು ಸಿಗುತ್ತದೆ.

- ಪ್ರತಿ ಗುರುವಾರ, ಸಾಯಿನಾಥನ ದೇವಾಲಯದಲ್ಲಿ ಅರ್ಚಕರಿಂದ ಈ ಪುಸ್ತಕವನ್ನು ಪಠಿಸಿದರೆ, ಆ ದೇವಾಲಯಗಳು ಮಹಾಮಾನ್ವಿತವಾದ ದಿವ್ಯಕ್ಷೇತ್ರವೆಂದು ಹೆಸರೊಂದುತ್ತದೆ. ಅಲ್ಲಿಗೆ ಬರುವ ಭಕ್ತರೆಲ್ಲರಿಗೂ ಸಾಯಿನಾಥನ ಅನುಗ್ರಹವು ಸಿಕ್ಕಿ ಸುಖಸಂತೋಷಗಳಿಂದ ಜೀವಿಸುತ್ತಾರೆ.

- ಶ್ರೀ ಸಾಯಿನಾಥನ ದಿವ್ಯಕ್ಷೇತ್ರವಾದ ಶಿರಡಿಯಲ್ಲಾಗಲಿ, ಯಾವುದೇ ಪುಣ್ಯಕ್ಷೇತ್ರಗಳಲ್ಲಾಗಲೀ, ಈ ವ್ರತವನ್ನು ಆಚರಿಸಿದರೆ ಕೆಲವು ಕೋಟಿ ಜನ್ಮದ ಪಾಪವು ನಶಿಸುತ್ತದೆ. ವ್ರತವನ್ನು ಆಚರಿಸಿದ ಕೂಡಲೇ ಶರೀರದಲ್ಲಿಯ ರೋಗಗಳೆಲ್ಲಾ ನಿವಾರಣೆಯಾಗುತ್ತದೆ. ಶರೀರಕ್ಕೆ ಹೊಸ ತೇಜಸ್ಸು ಉಂಟಾಗುತ್ತದೆ. ದೀರ್ಘಾಯುಷ್ಯದಿಂದ ಸುಖವಾಗಿ ಜೀವಿಸುತ್ತಾರೆ.

- ಸಂತಾನವನ್ನು ಬಯಸುವವರು ಸಾಯಿನಾಥನ ದೇವಾಲಯಲ್ಲಿ ಗುರುವಾರ ಈ ಪುಸ್ತಕವನ್ನು ಪಠಿಸಿದರೆ, ಖಂಡಿತವಾಗಿ ಒಳ್ಳೆಯ ಸಂತಾನವನ್ನು ಪಡೆಯುತ್ತಾರೆ. ವಿವಾಹವಾಗದ ಯುವಕ, ಯುವತಿಯರು ಈ ವಿಧವಾಗಿ ವ್ರತವನ್ನು ಆಚರಿಸಿದರೆ, ಶೀಘ್ರದಲ್ಲಿಯೇ ಅವರಿಗೆ ವಿವಾಹವು ಜರುಗುತ್ತದೆ.

- ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತ, ನಿಮ್ಮ ಬಂಧುಗಳ ನಿಮಿತ್ತ, ನೀವು ಕೂಡ ಓದಬಹುದು. ಅವರಿಗೆ ವಿದ್ಯೆ, ವಿವಾಹ, ಸಂತಾನ, ಉದ್ಯೋಗ, ಆರೋಗ್ಯಕ್ಕಾಗಿ ಈ ಪುಸ್ತಕವನ್ನು ಗುರುವಾರದ ದಿನ ಸಾಯಿನಾಥನ ಯಾವುದೇ ದೇವಾಲಯದಲ್ಲಿ ಓದಿದರೆ ತಕ್ಷಣ ಫಲಿತವು ಸಿಗುತ್ತದೆ.

- ಮತ್ತೊಂದು ಮುಖ್ಯ ವಿಶೇಷವೇನೆಂದರೆ, ಸಾಯಿನಾಥನಿಗೆ ತನ್ನ ಭಕ್ತರೆಂದರೆ ತುಂಬಾ ಅಭಿಮಾನ. ಅತ್ಯಂತ ಪ್ರೇಮ. ನಿಮ್ಮೆಲ್ಲರನ್ನು ತನ್ನ ಸ್ವಂತಮಕ್ಕಳ ಹಾಗೆ ಭಾವಿಸುತ್ತಾನೆ. ನಿಮ್ಮ ಯೋಗಕ್ಷೇಮಗಳನ್ನು ಯಾವಾಗಲೂ ಗಮನಿಸುತ್ತಿರುತ್ತಾನೆ. ಈ ವ್ರತವನ್ನು ಪ್ರಶಾಂತ ಮನಸ್ಸಿನಿಂದ ಆಚರಿಸಿದರೆ, ವ್ರತವು ಪೂರ್ತಿಯಾದ ಕೂಡಲೇ ಆ ಸಾಯಿನಾಥನು ಯಾವುದೋ ಒಂದು ರೂಪದಲ್ಲಿ ನಿಮ್ಮ ಮನೆಗೆ ಬಂದು, ಅವನು ಕೂಡಾ ಪ್ರಸಾದವನ್ನು ಸ್ವೀಕರಿಸುತ್ತಾನೆ. ನಿಮಗೆ ತಿಳಿದ ಬಂಧುಗಳ ರೂಪದಲ್ಲೋ ಅಥವಾ ಯಾರೋ ಅಪರಿಚಿತ ವ್ಯಕ್ತಿಯ ರೂಪದಲ್ಲೋ ಇಲ್ಲದಿದ್ದರೆ ಸಾಕುಪ್ರಾಣಿಯ ರೂಪದಲ್ಲೋ, ಯಾವುದೋ ಕ್ರಿಮಿಕೀಟದ ರೂಪದಲ್ಲೋ, ಪಕ್ಷಿಯ ರೂಪದಲ್ಲೋ ಹೀಗೆ ಯಾವುದೋ ಒಂದು ರೂಪದಲ್ಲಿ ಬಂದು ಪ್ರಸಾದವನ್ನು ತಪ್ಪದೆ ಸ್ವೀಕರಿಸುತ್ತಾನೆ. ಈ ವಿಷಯವನ್ನು ಸಾಕ್ಷಾತ್ ಆ ಸಾಯಿನಾಥನೇ ಆದೇಶಿಸಿದ್ದಾನೆ.

ಈ ವಿಧವಾಗಿ, ಯಾವ ರೀತಿಯಲ್ಲಾಗಲಿ, ಯಾವ ದಿನದಲ್ಲಾಗಲಿ ಈ ಪುಸ್ತಕವನ್ನು ಓದಿ, ಶ್ರೀ ಸಾಯಿನಾಥನ ಅನುಗ್ರಹವನ್ನು ಪಡೆಯಬಹುದು.

*******

# ಶ್ರೀ ಸಾಯಿ ರಕ್ಷಾ ವ್ರತ

## ಅಥ ಅಂಗ ಪೂಜ

ಓಂ ತೀರ್ಥಪಾದಾಯ ನಮಃ | ಪಾದೌ ಪೂಜಯಾಮಿ |
ಓಂ ಬಲಾಯ ನಮಃ | ಜಂಘೇ ಪೂಜಯಾಮಿ |
ಓಂ ಆಧಾರಭೂತಾಯ ನಮಃ | ಜಾನುನೀ ಪೂಜಯಾಮಿ |
ಓಂ ವಿಶ್ವಪ್ರಪೂಜಿತಾಯ ನಮಃ | ಊರೂ ಪೂಜಯಾಮಿ |
ಓಂ ಜಿತೇಂದ್ರಿಯಾಯಾ ನಮಃ | ಗುಹ್ಯO ಪೂಜಯಾಮಿ |
ಓಂ ಸ್ಥಿತಪ್ರಜ್ಞಾಯ ನಮಃ | ಕಟಿಂ ಪೂಜಯಾಮಿ |
ಓಂ ಮಿತಾಶನಾಯ ನಮಃ | ಉದರಂ ಪೂಜಯಾಮಿ |
ಓಂ ವಿಶಾಲವಕ್ಷಸೇ ನಮಃ | ವಕ್ಷಸ್ಥಲಂ ಪೂಜಯಾಮಿ |
ಓಂ ಶುದ್ಧಹೃದಯಾಯ  ನಮಃ | ಹೃದಯಂ ಪೂಜಯಾಮಿ |
ಓಂ ಶಿಷ್ಯ ವತ್ಸಲಾಯ ನಮಃ | ಸ್ಕಂದೌ ಪೂಜಯಾಮಿ |
ಓಂ ಆತ್ಮೋದ್ಧಾರಕಾಯ ನಮಃ | ಭುಜೌ ಪೂಜಯಾಮಿ  |
ಓಂ ದಾನಹಸ್ತಾಯ ನಮಃ | ಹಸ್ತೌ ಪೂಜಯಾಮಿ |
ಓಂ ಕಂಬುಕಂಠಾಯ ನಮಃ | ಕಂಠಂ ಪೂಜಯಾಮಿ |
ಓಂ ಪ್ರಸನ್ನವದನಾಯ ನಮಃ | ವದನಂ ಪೂಜಯಾಮಿ |
ಓಂ ಮೃದುಭಾಷಣಾಯ ನಮಃ | ಜಿಹ್ವಾO ಪೂಜಯಾಮಿ |
ಓಂ ಕರುಣಾನಿಧಯೇ ನಮಃ | ನೇತ್ರೇ ಪೂಜಯಾಮಿ |
ಓಂ ಶಸ್ತ್ರಾನುಸಾರಿಣೇ ನಮಃ | ಶಿರಃ ಪೂಜಯಾಮಿ |
ಓಂ ಸರ್ವಜ್ಞಾಯ ನಮಃ | ಸರ್ವಾಣ್ಯಂಗಾನಿ ಪೂಜಯಾಮಿ |
ಶ್ರೀ ಸಾಯಿನಾಥ ಸ್ವಾಮಿನೇ ನಮಃ | ದಿವ್ಯಸುಂದರವಿಗ್ರಹಂ ಪೂಜಯಾಮಿ ||

*******

# ಶ್ರೀ ಶಿರಡಿಸಾಯಿ ಅಷ್ಟೋತ್ತರ ಶತನಾಮಾವಳಿ:

ಓಂ ಶ್ರೀ ಸಾಯಿನಾಥಾಯ ನಮಃ |
ಓಂ ಲಕ್ಷ್ಮೀ ನಾರಾಯಣಾಯ ನಮಃ |
ಓಂ ರಾಮಕೃಷ್ಣ ಶಿವ ಮಾರುತ್ಯಾದಿ ರೂಪಾಯ ನಮಃ |
ಓಂ ಶೇಷಶಾಯಿನೇ ನಮಃ |
ಓಂ ಗೋದಾವರೀತಟ ಶಿರಡಿವಾಸಿನೇ ನಮಃ |
ಓಂ ಭಕ್ತ ಹೃದಯಾಲಯಾಯ ನಮಃ |
ಓಂ ಸರ್ವಹೃದ್ವಾಸಿನೇ ನಮಃ |
ಓಂ ಭೂತಾವಾಸಾಯ ನಮಃ |
ಓಂ ಭೂತಭವಿಷ್ಯದ್ಭಾವವರ್ಜಿತಾಯ ನಮಃ |
ಓಂ ಕಾಲಾತೀತಾಯ ನಮಃ | (10)
ಓಂ ಕಾಲಾಯ ನಮಃ |
ಓಂ ಕಾಲಕಾಲಾಯ ನಮಃ |

ಓಂ ಕಾಲದರ್ಪದಮನಾಯ ನಮಃ|
ಓಂ ಮೃತ್ಯುಂಜಯಾಯ ನಮಃ|
ಓಂ ಅಮರ್ತ್ಯಾಯ ನಮಃ|
ಓಂ ಮರ್ತ್ಯಾಭಯಪ್ರದಾಯ ನಮಃ|
ಓಂ ಜೀವಾಧಾರಾಯ ನಮಃ|
ಓಂ ಸರ್ವಾಧಾರಾಯ ನಮಃ|
ಓಂ ಭಕ್ತಾವನಸಮರ್ಥಾಯ ನಮಃ|
ಓಂ ಭಕ್ತಾವನಪ್ರತಿಜ್ಞಾಯ ನಮಃ| (20)
ಓಂ ಅನ್ನವಸ್ತ್ರದಾಯ ನಮಃ|
ಓಂ ಆರೋಗ್ಯಕ್ಷೇಮದಾಯ ನಮಃ|
ಓಂ ಧನಮಾಂಗಲ್ಯಪ್ರದಾಯ ನಮಃ|
ಓಂ ಬುದ್ಧಿಸಿದ್ಧಿಪ್ರದಾಯ ನಮಃ|
ಓಂ ಪುತ್ರಮಿತ್ರಕಳತ್ರಬಂಧುದಾಯ ನಮಃ|
ಓಂ ಯೋಗಕ್ಷೇಮವಹಾಯ ನಮಃ|
ಓಂ ಆಪದ್ಬಾಂಧವಾಯ ನಮಃ|
ಓಂ ಮಾರ್ಗಬಂಧವೇ ನಮಃ|
ಓಂ ಭುಕ್ತಿಮುಕ್ತಿಸ್ವರ್ಗಪವರ್ಗದಾಯ ನಮಃ|
ಓಂ ಪ್ರಿಯಾಯ ನಮಃ| (30)
ಓಂ ಪ್ರೀತಿವರ್ಧನಾಯ ನಮಃ|
ಓಂ ಅಂತರ್ಯಾಮಿನೇ ನಮಃ|
ಓಂ ಸಚ್ಚಿದಾತ್ಮನೇ ನಮಃ|
ಓಂ ನಿತ್ಯಾನಂದಾಯ ನಮಃ|
ಓಂ ಪರಮಸುಖದಾಯ ನಮಃ|
ಓಂ ಪರಮೇಶ್ವರಾಯ ನಮಃ|
ಓಂ ಪರಬ್ರಹ್ಮಣೇ ನಮಃ|
ಓಂ ಪರಮಾತ್ಮನೇ ನಮಃ|
ಓಂ ಜ್ಞಾನ ಸ್ವರೂಪಿಣೇ ನಮಃ|
ಓಂ ಜಗತಃ ಪಿತ್ರೇ ನಮಃ| (40)
ಓಂ ಭಕ್ತಾನಾಂ ಮಾತೃದಾತೃ ಪಿತಾಮಹಾಯ ನಮಃ|
ಓಂ ಭಕ್ತಾಭಯಪ್ರದಾಯ ನಮಃ|
ಓಂ ಭಕ್ತವತ್ಸಲಾಯ ನಮಃ|
ಓಂ ಭಕ್ತಾನುಗ್ರಹಕಾರಕಾಯ ನಮಃ|
ಓಂ ಶರಣಾಗತವತ್ಸಲಾಯ ನಮಃ|
ಓಂ ಭಕ್ತಿಶಕ್ತಿಪ್ರದಾಯ ನಮಃ|
ಓಂ ಜ್ಞಾನವೈರಾಗ್ಯದಾಯ ನಮಃ|
ಓಂ ಪ್ರೇಮಪ್ರದಾಯ ನಮಃ|
ಓಂ ಸಂಶಯಹೃದಯದೌರ್ಭಲ್ಯಪಾಪಕರ್ಮವಾಸನಾಕ್ಷಯಕರಾಯ ನಮಃ|
ಓಂ ಹೃದಯಗ್ರಂಧಿಭೇಧಕಾಯ ನಮಃ| (50)

ಓಂ ಕರ್ಮಧ್ವಂಸಿನೇ ನಮಃ|
ಓಂ ಶುದ್ಧಸತ್ವಸ್ಥಿತಾಯ ನಮಃ|
ಓಂ ಗುಣಾತೀತಗುಣಾತ್ಮನೇ ನಮಃ|
ಓಂ ಅನಂತಕಳ್ಯಾಣಗುಣಾಯ ನಮಃ|
ಓಂ ಅಮಿತಪರಾಕ್ರಮಾಯ ನಮಃ|
ಓಂ ಜಯನೇ ನಮಃ|
ಓಂ ದುರ್ದರಾಕ್ಷೋಭ್ಯಾಯ ನಮಃ|
ಓಂ ಅಪರಾಜಿತಾಯ ನಮಃ|
ಓಂ ತ್ರಿಲೋಕೇಷಾಧಿಗತಯೇ ನಮಃ|
ಓಂ ಅಸಕ್ಯರಹಿತಾಯ ನಮಃ| (60)
ಓಂ ಸರ್ವಶಕ್ತಿಮೂರ್ತಯೇ ನಮಃ|
ಓಂ ಸುರೂಪಸುಂದರಾಯ ನಮಃ|
ಓಂ ಸುಲೋಚನಾಯ ನಮಃ|
ಓಂ ಬಹುರೂಪವಿಶ್ವಮೂರ್ತಯೇ ನಮಃ|
ಓಂ ಅರೂಪವ್ಯಕ್ತಾಯ ನಮಃ|
ಓಂ ಅಚಿಂತ್ಯಾಯ ನಮಃ|
ಓಂ ಸೂಕ್ಷ್ಮಾಯ ನಮಃ|
ಓಂ ಸರ್ವಾಂತರ್ಯಾಮಿನೇ ನಮಃ|
ಓಂ ಮನೋವಾಗತೀತಾಯ ನಮಃ|
ಓಂ ಪ್ರೇಮಮೂರ್ತಯೇ ನಮಃ| (70)
ಓಂ ಸುಲಭದುರ್ಲಭಾಯ ನಮಃ|
ಓಂ ಅಸಹಾಯಸಹಾಯಾಯ ನಮಃ|
ಓಂ ಅನಾಥನಾಧಧಿನಬಂಧವೇ ನಮಃ|
ಓಂ ಸರ್ವಭಾರಭೃತೇ ನಮಃ|
ಓಂ ಅಕರ್ಮಾನೇಕಕರ್ಮಾನುಕರ್ಮಿಣೇ ನಮಃ|
ಓಂ ಪುಣ್ಯಶ್ರವಣಕೀರ್ತನಾಯ ನಮಃ|
ಓಂ ತೀರ್ಧಾಯ ನಮಃ|
ಓಂ ವಾಸುದೇವಾಯ ನಮಃ|
ಓಂ ಸತಾಂಗತಯೇ ನಮಃ|
ಓಂ ಸತ್ಪರಾಯಣಾಯ ನಮಃ| (80)
ಓಂ ಲೋಕನಾಧಾಯ ನಮಃ|
ಓಂ ಪಾವನಾನಘಾಯ ನಮಃ|
ಓಂ ಅಮೃತಾಂಶವೇ ನಮಃ|
ಓಂ ಭಾಸ್ಕರಪ್ರಭಾಯ ನಮಃ|
ಓಂ ಬ್ರಹ್ಮಚರ್ಯತಪಶ್ಚರ್ಯಾದಿಸುವ್ರತಾಯ ನಮಃ|
ಓಂ ಸತ್ಯಧರ್ಮಪರಾಯಣಾಯ ನಮಃ|
ಓಂ ಸಿದ್ದೇಶ್ವರಾಯ ನಮಃ|
ಓಂ ಸಿದ್ದಸಂಕಲ್ಪಾಯ ನಮಃ|

ಓಂ ಯೋಗೇಶ್ವರಾಯ ನಮಃ।
ಓಂ ಭಗವತೇ ನಮಃ। (90)
ಓಂ ಭಕ್ತಾವಶ್ಯಾಯ ನಮಃ।
ಓಂ ಸತ್ಪುರುಷಾಯ ನಮಃ।
ಓಂ ಪುರುಷೋತ್ತಮಾಯ ನಮಃ।
ಓಂ ಸತ್ಯತತ್ತ್ವಬೋಧಕಾಯ ನಮಃ।
ಓಂ ಕಾಮಾದಿಷಡ್ವೈವರಧ್ವಂಸಿನೇ ನಮಃ।
ಓಂ ಅಭೇದಾನಂದಾನುಭವಪ್ರದಾಯ ನಮಃ।
ಓಂ ಸರ್ವಮತಸಮ್ಮತಾಯ ನಮಃ।
ಓಂ ದಕ್ಷಿಣಾಮೂರ್ತಯೇ ನಮಃ।
ಓಂ ಶ್ರೀ ವೇಂಕಟೇಶರಮಣಾಯ ನಮಃ।
ಓಂ ಅದ್ಭುತಾನಂದಚರ್ಯಾಯ ನಮಃ। (100)
ಓಂ ಪ್ರಪನ್ನಾರ್ತಿಹರಾಯ ನಮಃ।
ಓಂ ಸಂಸಾರಸರ್ವದುಃಖಕ್ಷಯಾಯ ನಮಃ।
ಓಂ ಸರ್ವವಿತ್ಸರ್ವತೋಮುಖಾಯ ನಮಃ।
ಓಂ ಸರ್ವಾಂತರ್ಭಹಿಸ್ಥಿತಾಯ ನಮಃ।
ಓಂ ಸರ್ವಮಂಗಳಕರಾಯ ನಮಃ।
ಓಂ ಸರ್ವಾಭೀಷ್ಟಪ್ರದಾಯ ನಮಃ।
ಓಂ ಸಮರಸನ್ಮಾರ್ಗಸ್ಥಾಪನಾಯ ನಮಃ।
ಓಂ ಸಮರ್ಥಸದ್ಗುರು ಸಾಯಿನಾಥಾಯ ನಮಃ। (108)

**॥ ಶ್ರೀ ಶಿರಡಿಸಾಯಿ ಅಷ್ಟೋತ್ತರ ಶತನಾಮಾವಳಿ: ಸಮಾಪ್ತಂ ॥**

*******

# ಶ್ರೀ ಸಾಯಿ ರಕ್ಷಾ ವ್ರತ

## ಪ್ರಥಮ ಅಧ್ಯಾಯ

## **ವಿಶ್ವನಾಥ ರಾವ್ ಕಥೆ**

ಪೂರ್ವಕಾಲದಲ್ಲಿ ಅಹ್ಮದ್ ನಗರಕ್ಕೆ ನಲವತ್ತು ಮೈಲು ದೂರದಲ್ಲಿ ಒಂದು ಚಿಕ್ಕ ಹಳ್ಳಿಯಿತ್ತು. ಆ ಊರಲ್ಲಿ ವಿಶ್ವನಾಥ ರಾವ್ ಎಂಬ ಚಪ್ಪಲಿ ಹೊಲಿಯುವವನು ಇದ್ದನು. ಅವನು ಒಂದು ಗುಡಿಸಲಿನಲ್ಲಿ ವಾಸಿಸುತ್ತಾ ಆ ಊರಿನ ಮಧ್ಯದಲ್ಲಿರುವ ವಿದ್ಯುತ್ ಕಂಬದ ಕೆಳಗೆ ಕುಳಿತುಕೊಂಡು ಹಗಲೆಲ್ಲಾ ಚಪ್ಪಲಿಗಳನ್ನು ಹೊಲಿಯುತ್ತಿದ್ದನು. ಹೆಂಡತಿ, ಇಬ್ಬರು ಹೆಣ್ಣುಮಕ್ಕಳೊಂದಿಗೆ ಸಂಸಾರ ಭಾರವನ್ನು ಹೊರುವುದು ಕಷ್ಟವಾಗಿತ್ತು. ಬರುವ ಸ್ವಲ್ಪ ಹಣದಲ್ಲೇ ಜೀವನವನ್ನು ಸಾಗಿಸುತ್ತಿದ್ದನು. ಒಂದು ದಿನ ಕೆಲಸ ಸಿಗುವುದು, ಮತ್ತೊಂದು ದಿನ ಕೆಲಸವಿಲ್ಲದೇ ಜೀವನವು ಸಾಗುತ್ತಿತ್ತು.

ವಿಶ್ವನಾಥ ರಾವ್.ನಿಗೆ ಸಾಯಿನಾಥನೆಂದರೆ ತುಂಬಾ ಭಕ್ತಿ. ಪ್ರತಿನಿತ್ಯ ಆ ಸಾಯಿನಾಥನನ್ನೇ ಸ್ಮರಿಸುತ್ತಿದ್ದನು. ಯಾವ ಕೆಲಸದಲ್ಲಿದ್ದರು ಸಾಯಿನಾಮ ಸ್ಮರಣೆಯಲ್ಲೇ ಕಳೆಯುತ್ತಿದ್ದನು. ಯಾವಾಗಲಾದರೂ ತಾನು ನಂಬಿದ ಸಾಯಿನಾಥ ದೇವರು ತನ್ನನ್ನು ಈ ಬಾಧೆಗಳಿಂದ ಹೊರತರುತ್ತಾನೆಂದು ಭಾವಿಸುತ್ತಿದ್ದನು. ಪ್ರತಿದಿನ ತನ್ನ ಮನೆಯಲ್ಲಿರುವ ಚಿಕ್ಕ ಸಾಯಿನಾಥನ ಚಿತ್ರಪಟಕ್ಕೆ ನಮಸ್ಕರಿಸಿ, ಆ ಚಿತ್ರಪಟವನ್ನು ಕೈಯಲ್ಲಿ ಹಿಡಿದುಕೊಂಡು ಬೆಳಿಗ್ಗೆಯೇ ಹತ್ತುಗಂಟೆಗೆಲ್ಲಾ ಚಪ್ಪಲಿ ಹೊಲಿಯಲು ಬೇಕಾದ ಸಮಾನನ್ನೆಲ್ಲ ಒಂದು ಹಳೆಯ ಚೀಲದಲ್ಲಿ ಹಾಕಿಕೊಂಡು ಭುಜಕ್ಕೆ ಏರಿಸಿಕೊಂಡು ವಿದ್ಯುತ್ ಸ್ತಂಭದ ಹತ್ತಿರ ಸೇರಿಕೊಳ್ಳುತ್ತಿದ್ದನು. ಆ ಸ್ತಂಭಕ್ಕೆ ಸಾಯಿನಾಥನ ಚಿತ್ರಪಟವನ್ನು ನೇತುಹಾಕಿ, ಅದರ ಕೆಳಗೆನೇ ಸ್ತಂಭಕ್ಕೆ ಒರಗಿ ಕುಳಿತುಕೊಳ್ಳುತ್ತಿದ್ದನು. ಸಾಯಂಕಾಲ ಆರು ಗಂಟೆಯವರೆಗೆ ಅಲ್ಲೇ ಇದ್ದು, ತಿರುಗಿ ಸಮಾನನ್ನೆಲ್ಲ ಆ ಚೀಲದಲ್ಲಿ ಎತ್ತುಕೊಂಡು ಸಾಯಿನಾಥನ ಚಿತ್ರಪಟಕ್ಕೆ ಭಕ್ತಿಯಿಂದ ನಮಸ್ಕರಿಸಿ, ಕಂಕುಳಲ್ಲಿ ಇಟ್ಟುಕೊಂಡು ತಿರುಗಿ ಮನೆಯನ್ನು ಸೇರುತ್ತಿದ್ದನು.

ಈ ವಿಧವಾಗಿ ಅವನ ದಿನಚರ್ಯೆ ಸಾಗುತ್ತಿತ್ತು. ಪ್ರತಿದಿನ ಬಂದ ಹಣದಿಂದ ಮನೆಗೆ ಹೋಗುವಾಗ ದಾರಿಯಲ್ಲಿ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದನು. ತಾನು ಮಾಡಿದ ಕೆಲಸಕ್ಕೆ, ಯಾರನ್ನೂ ಇಷ್ಟು ಹಣ ಕೊಡಿ ಎಂದು ಒತ್ತಾಯಮಾಡುತ್ತಿರಲಿಲ್ಲ, ಅವರು ಕೊಟ್ಟದ್ದನ್ನು ಭಕ್ತಿಯಿಂದ ತೆಗೆದುಕೊಳ್ಳುತ್ತಿದ್ದನು. ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ತನ್ನ ಕೆಲಸವನ್ನು ಮಾಡಿಕೊಳ್ಳುತ್ತಿರುವಾಗ ಸರ್ಕಾರದ ಪ್ರಕಟಣೆ ಕೇಳಿಬಂತು. 'ಬಡವರಿಗೆ ಸರ್ಕಾರವು ಉಚಿತವಾಗಿ ಮನೆ ನಿರ್ಮಿಸಿ ಕೊಡುತ್ತದೆಂದು, ಬೇಕಾದವರು ಬರುವ ತಿಂಗಳಿನ ಒಂದನೇ ತಾರೀಕು ಒಳಗೆ ತಮ್ಮ ಹೆಸರು ಮತ್ತು ವಿವರಗಳನ್ನು ನಮೂದಿಸಬೇಕೆಂದು' ಅದರ ಸಾರಾಂಶ. ಇದನ್ನು ಕೇಳಿದ ವಿಶ್ವನಾಥನು ಅತ್ಯಾನಂದಪಟ್ಟನು. ಆ ಸಾಯಿನಾಥನ ದಯೆಯಿಂದ ಒಂದು ಸಣ್ಣಮನೆ ಸಿಕ್ಕರೆ ಒಳ್ಳೆದಿರುತ್ತದೆಂದು ಭಾವಿಸಿದನು. ಅದಕ್ಕೆ ಮಿಗಿಲಾದ ಭಾಗ್ಯವು ಇಲ್ಲವೆಂದುಕೊಂಡನು. ಆನಂತರ, ಇನ್ನೊಂದು ವಿಷಯ ಕೂಡಾ ಅವನ ಕಿವಿಗೆ ಕೇಳಿಸಿತು. 'ಹೆಸರು ನೋಂದಾಯಿಸುತ್ತಾ, ಮುನ್ನೂರು ರೂಪಾಯಿಯ ಶುಲ್ಕ ಕಟ್ಟಬೇಕೆಂದು' ಕೂಡಾ ಪ್ರಕಟಿಸಿದರು. ಇದನ್ನು ಕೇಳಿದ ವಿಶ್ವನಾಥನಿಗೆ ಆತಂಕ ಶುರುವಾಯಿತು. ಬಹಳ ಕಷ್ಟದಿಂದ ತನಗೆ ದಿನಕ್ಕೆ ಎರಡು ರೂಪಾಯಿಗಳು ಸಿಗುತ್ತದೆ. ಅಂದರೆ ತಿಂಗಳಿಗೆ ಅರವತ್ತು ರೂಪಾಯಿಗಳು ಎಂದರ್ಥ. ಹಾಗಿರುವಾಗ, ಒಮ್ಮೆಲೇ ಮುನ್ನೂರು

ರೂಪಾಯಿಗಳನ್ನು ಹೇಗೆ ಸಂಪಾದಿಸಲಿ? ಹೀಗೆ ಆಲೋಚಿಸುತ್ತಾ ವಿಶ್ವನಾಥ ರಾವ್ ಬಹಳ ನಿರಾಶೆಪಟ್ಟನು.

ರಾತ್ರಿ ಮನೆಗೆ ಬಂದು ಹೆಂಡತಿಗೆ ಈ ವಿಷಯವನ್ನೆಲ್ಲಾ ಹೇಳಿದನು. ಹೆಂಡತಿಯು 'ನಾವು ಆ ಸಾಯಿನಾಥನನ್ನು ನಂಬಿದ್ದೇವೆ. ಎಲ್ಲಾ ಆ ಶಿರಡಿವಾಸನೇ ನೋಡಿಕೊಳ್ಳುತ್ತಾನೆ' ಎಂದಳು. ಮುನ್ನೂರು ರೂಪಾಯಿಗಳನ್ನು ಕಟ್ಟಲು ಇನ್ನು ಇಪತ್ತು ದಿನಗಳು ಮಾತ್ರವೇ ಉಳಿದಿದೆ. ಈ ಇಪತ್ತು ದಿನಗಳಲ್ಲಿ ಮುನ್ನೂರು ರೂಪಾಯಿಗಳು ಸಿಗುವುದು ವಿಶ್ವನಾಥ ರಾವ್.ಗೆ ಬಹಳ ಕಷ್ಟವಾಗಿ ತೋಚಿತು. ಆ ಸಾಯಿನಾಥನೇ ತನ್ನ ರಕ್ಷಕನೆಂದು ಭಾವಿಸಿದನು.

ಸಾಯಿನಾಥನು ನಂಬಿದವರನ್ನು ನಿತ್ಯ ರಕ್ಷಿಸುವ ದೈವ. ಯಾರು ಮನಸ್ಫೂರ್ತಿಯಾಗಿ ತನ್ನನ್ನು ಪೂಜಿಸುತ್ತಾರೋ ಅವರನ್ನು ದಿನನಿತ್ಯ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುವ ಅಮೃತಮೂರ್ತಿ ಆ ಸಾಯಿನಾಥನು. ಆ ಪ್ರೇಮಮೂರ್ತಿಗೆ ತನ್ನನ್ನು ನಂಬಿದವರೆಂದರೇ ಅಪಾರವಾದ ಪ್ರೀತಿ. ಆ ಸಾಯಿನಾಥನ ಅನುಗ್ರಹದಿಂದ ವಿಶ್ವನಾಥ ರಾವ್.ಗೆ ಆನಂತರದ ದಿನಗಳಲ್ಲಿ ನಿತ್ಯಸಿಕ್ಕುವ ಕೆಲಸಕ್ಕಿಂತ ಜಾಸ್ತಿ ಕೆಲಸ ಸಿಕ್ಕಿತು. ಹಾಗೆ ಇಪ್ಪತ್ತೆಂಟನೇ ತಾರೀಕು ಬಂತು. ಹತ್ತಿರತ್ತಿರ ಇನ್ನೂರು ರೂಪಾಯಿಗಳು ಒಟ್ಟಾಯಿತು. ತನ್ನ ಜೀವನದಲ್ಲಿ ಇಷ್ಟು ಕಡಿಮೆ ಸಮಯದಲ್ಲಿ ಇಷ್ಟು ದೊಡ್ಡಮೊತ್ತದ ಹಣ ಯಾವತ್ತು ಒಟ್ಟಾಗಿರಲಿಲ್ಲ. ಇದೆಲ್ಲಾ ಆ ಸ್ವಾಮಿಯ ಮಹಿಮೆ ಎಂದು ಭಾವಿಸಿದನು. ಆದರೆ, ಇನ್ನು ಎರಡು ದಿನಗಳು ಮಾತ್ರವಿದೆ. ಈ ಎರಡು ದಿನಗಳಲ್ಲಿ ಮತ್ತೆ ನೂರು ರೂಪಾಯಿಗಳನ್ನು ಒಟ್ಟಾಗಿಸಬೇಕು. ಆದರೆ, ಆ ಎರಡು ದಿನಗಳಲ್ಲಿ ಹೆಚ್ಚಿನ ಕೆಲಸ ಸಿಗಲಿಲ್ಲ. ಕೇವಲ ಹತ್ತು ರೂಪಾಯಿ ಮಾತ್ರವೇ ಬಂತು.

ಒಂದನೇ ತಾರೀಕು ಬಂತು. ತನ್ನ ಹತ್ತಿರ ಕೇವಲ ಇನ್ನೂರಹತ್ತು ರೂಪಾಯಿಗಳು ಮಾತ್ರವೇ ಇದೆ. ಅದನ್ನು ತೆಗೆದುಕೊಂಡು ಕಂದಾಯ ಕಚೇರಿಗೆ ಹೋದನು. ಅಲ್ಲಿರುವ ಒಬ್ಬ ಗುಮಾಸ್ತನನ್ನು ನೋಡಿ ಅವನ ಹತ್ತಿರ 'ತನ್ನ ಹತ್ತಿರ ಇನ್ನೂರಹತ್ತು ರೂಪಾಯಿಗಳು ಮಾತ್ರವೇ ಇದೆಯೆಂದು, ಈಗ ಈ ಹಣವನ್ನು ಕಟ್ಟಿ, ಉಳಿದ ಹಣವನ್ನು ನಂತರ ಕಟ್ಟಬಹುದಾ' ಎಂದು ಕೇಳಿದನು. ' ಆದರೆ, ಖಂಡಿತಾ ಇದಕ್ಕೆ ಅನುಮತಿಯಿಲ್ಲವೆಂದು, ಈ ದಿನ ಒಟ್ಟು ಮುನ್ನೂರು ರೂಪಾಯಿಗಳನ್ನು ಕಟ್ಟಿದವರ ಹೆಸರುಗಳನ್ನೂ ಮಾತ್ರವೇ ನಮೂದಿಸುತ್ತಾರೆಂದು' ಅವನು ಹೇಳಿದನು. ಇದನ್ನು ಕೇಳಿದ ವಿಶ್ವನಾಥ ರಾವ್ ಬಹಳ ನಿರಾಶನಾದನು. ಏನೂ ಮಾಡುವುದೆಂದು ತಿಳಿಯದೆ, ಆ ಕಚೇರಿಯಲ್ಲೇ ಆಚೆ-ಈಚೆ ತಿರುಗಿದನು. ಏನು ಮಾಡಬೇಕೋ ತಲೆಗೆ ಹೊಳೆಯುತ್ತಿಲ್ಲ. ಇನ್ನು ಸ್ವಲ್ಪ ಗಂಟೆಗಳಲ್ಲೇ ತನ್ನ ಆಸೆಗಳು ಮಣ್ಣುಪಾಲಾಗುತ್ತದೆ. ಬಹಳ ನೋವಿನಿಂದ ಆ ಶಿರಡಿ ಸಾಯಿನಾಥನನ್ನು ಸ್ಮರಿಸುತ್ತಾ ಅಲ್ಲಿಗೆ ಬಂದ ಮತ್ತಿಬ್ಬರೊಂದಿಗೆ ಈ ವಿಷಯವಾಗಿ ಕೇಳಿದನು. ಅವರು ಕೂಡಾ ಹೀಗೆ ಹೇಳಿದರು 'ಸಾಯಂಕಾಲದೊಳಗೆ ಮುನ್ನೂರು ರೂಪಾಯಿಗಳನ್ನು ಕಟ್ಟಿದವರಿಗೆ ಮನೆ ಸಿಗುತ್ತದೆಂದು' ಹೇಳಿದರು.

ವಿಶ್ವನಾಥ ರಾವ್ ಏನೂ ಮಾಡುವುದೆಂದು ತಿಳಿಯದೆ, ಅಲ್ಲಿರುವ ಚಹಾ ಅಂಗಡಿಯ ಹತ್ತಿರ ಕುಳಿತುಕೊಂಡು, ಹತ್ತುಪೈಸೆಯಿಂದ ಚಹಾ ಕುಡಿದನು. ಕಣ್ಣುಗಳನ್ನು ಮುಚ್ಚಿಕೊಂಡು ಆ ಸಾಯಿನಾಥನನ್ನು ಪ್ರಾರ್ಥಿಸಿದನು. ಸ್ವಾಮೀ! ಇನ್ನು ನನಗೆ ಸ್ವಂತ ಮನೆಯ ಭಾಗ್ಯವಿಲ್ಲವಾ ಎಂದು ಬಾಧೆಪಟ್ಟನು. ಹಾಗೆ ಒಂದು ಗಂಟೆ ಕಳೆಯಿತು. ಒಂದುಸಾರಿ ಕಚೇರಿ ಒಳಗೋಗಿ

ಯಾರಾದರೂ ದೊಡ್ಡ ಅಧಿಕಾರಿಯೊಟ್ಟಿಗೆ ತನ್ನ ಅಳಲು ಹೇಳಿಕೊಳೋಣವೆಂದು ಆಲೋಚಿಸಿದನು. ಒಳಗೋಗಿ ಅಧಿಕಾರಿಗೆ ನಮಸ್ಕರಿಸಿ 'ತನ್ನ ಹೆಸರು ವಿಶ್ವನಾಥ ರಾವ್ ಎಂದು, ತಾನು ಚಪ್ಪಲಿಗಳನ್ನು ಹೊಲಿಯುತ್ತಾ ಸಮಯ ಕಳೆಯುತ್ತೆಂದು' ಹೇಳಹೋದನು. ಕೂಡಲೇ ಆ ಅಧಿಕಾರಿಯು 'ನಿಧಾನ ತಮ್ಮಾ ನಿಧಾನ! ಈಗಲೇ ನಿನ್ನ ತಂದೆ ಬಂದು ಮುನ್ನೂರು ರೂಪಾಯಿಗಳನ್ನು ಕಟ್ಟಿ ಹೋದನು. ನಿನಗೆ ಸಧ್ಯದಲ್ಲೆ ಮನೆ ಮಂಜೂರಾಗುತ್ತದೆ' ಎಂದನು. ಬಹಳ ಆಶ್ಚರ್ಯಪಡುತ್ತಾ ತಾನು ಏನೋ ಹೇಳಲು ಹೋಗುವಾಗ, ಆ ಅಧಿಕಾರಿಯು ತನ್ನ ಹೆಸರಲ್ಲಿರುವ ಅರ್ಜಿಗಳನ್ನು, ಮುನ್ನೂರು ರೂಪಾಯಿ ಹಣವನ್ನು ತೋರಿಸಿದನು. ಜರುಗಿದ್ದು ವಿಶ್ವನಾಥ ರಾವ್.ಗೆ ಅರ್ಥವಾಗಲಿಲ್ಲ. ಒಮ್ಮೆಲೇ ಆಶ್ಚರ್ಯಪಟ್ಟನು. ಅಧಿಕಾರಿಯೊಂದಿಗೆ ಏನೋ ಹೇಳಲು ಬಯಸಿದಾಗ ಕಚೇರಿ ಹುಡುಗನು ಬಂದು 'ಹೊರಡಯ್ಯ ಹೊರಗೆ ಹೊರಡು. ಸ್ವಾಮಿಗೆ ತುಂಬಾ ಕೆಲಸಗಳಿವೆ. ಇಷ್ಟುರವರೆಗೆ ಆ ಮುದಿಅಜ್ಜ ಬಂದು ಹಣ ಕಟ್ಟಿ ಹೋದನೆಂದು ಹೇಳಿದನು ಅಲ್ವಾ, ಹೊರಡು ಹೊರಡು ಎಂದು ಹೇಳಿ, ಹೊರಗೆ ಕಳುಹಿಸಿದನು.

ಜರುಗಿದ ವಿಷಯವೆಲ್ಲ ವಿಶ್ವನಾಥ ರಾವ್.ಗೆ ಅರ್ಥವಾಯಿತು. ಅವನ ಸಂತೋಷಕ್ಕೆ ಕೊನೆಯಿರಲಿಲ್ಲ. ಆ ಸಾಯಿನಾಥನೇ ಬಂದು, ತನ್ನ ಪರವಾಗಿ ಹಣ ಕಟ್ಟಿದನೆಂದು ತಿಳಿದನು. ತಾನು ನಂಬಿದ ಆ ಸಾಯಿನಾಥನೇ ತನಗೆ ಈ ವಿಧವಾಗಿ ಮನೆಯನ್ನು ಬಹುಮಾನವಾಗಿ ಕೊಟ್ಟಿದ್ದಾನೆಂದು ತಿಳಿದು ಸಂತೋಷದಿಂದ ಕಣ್ಣುಗಳು ತುಂಬಿಕೊಂಡವು. ಮನೆಗೆ ಹೋಗಿ ಜರುಗಿದ್ದೆಲ್ಲಾ ಹೆಂಡತಿಗೆ ತಿಳಿಸಿದನು. ಆ ಕುಟುಂಬದ ಸಂತೋಷ ಅಷ್ಟಿಷ್ಟಲ್ಲ. ತಾನು ನಂಬಿದ ಸಾಯಿನಾಥನು ತನ್ನನ್ನು ತುಂಬಾ ಅನುಗ್ರಹಿಸಿದ್ದಾನೆಂದು ನೆನೆದು ಅತ್ಯಾನಂದ ಪಟ್ಟನು. ಸ್ವಲ್ಪ ಸಮಯದಲ್ಲೇ ಅವರ ಮನೆ ಮಂಜೂರಾಯಿತು. ಒಂದು ಒಳ್ಳೆಯ ದಿನ ನೋಡಿ, ಆ ಮನೆಯನ್ನು ಸೇರಿ, ಜೀವಿಸಿದಷ್ಟು ದಿನ ಆ ಸಾಯಿನಾಥನ ಸೇವೆಯನ್ನು ಮಾಡುತ್ತಾ ಶಾಶ್ವತವಾದ ಸುಖದಿಂದ ಜೀವಿಸಿದರು.

ಸಾಯಿನಾಥನನ್ನು ನಂಬಿದವರಿಗೆ ಯಾವುದಕ್ಕೂ ಕೊರತೆಯಿರುವುದಿಲ್ಲ. ಆ ಶಿರಡಿನಾಥನನ್ನು ನಿತ್ಯ ಪೂಜಿಸುವವರಿಗೆ ಆ ಸ್ವಾಮಿಯು ಯಾವಾಗಲೂ ಆಸರೆಯಾಗಿರುತ್ತಾನೆ. ಅವರನ್ನು ಯಾವಾಗಲೂ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಿರುತ್ತಾನೆ. ಸನ್ಮಾರ್ಗದಲ್ಲಿ ಜೀವಿಸುತ್ತಾ, ಎಲ್ಲರಲ್ಲಿಯೂ ಆ ಸಾಯಿನಾಥನನ್ನೇ ನೋಡುವವರಿಗೆ ಯಾವುದಕ್ಕೂ ಕೊರತೆಯಿರುವುದಿಲ್ಲ. ಯಾವುದೇ ಆಪತ್ತು ಹತ್ತಿರ ಸುಳಿಯುವುದಿಲ್ಲ. ಜೀವನವೂ ಸಮಸ್ತ ಶ್ರೇಯಸ್ಸುಗಳೊಂದಿಗೆ ಮುಂದುವರಿಯುತ್ತದೆ.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು

|| ಓಂ ಸಮರ್ಥ ಸದ್ಗುರು ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿದೇವಾಯ ನಮಃ ||

*******

ಎರಡನೇ ಅಧ್ಯಾಯ

# ಭಾನೋಜಿ ರಾವ್ ಕಥೆ

ಪೂರ್ವಕಾಲದಲ್ಲಿ ಗುಲ್ಬರ್ಗ ಪಟ್ಟಣಕ್ಕೆ ಐವತ್ತು ಮೈಲು ದೂರದಲ್ಲಿ ಚಿಕ್ಕಗ್ರಾಮವಿತ್ತು. ಆ ಗ್ರಾಮದಲ್ಲಿ ಭಾನೋಜಿ ಎಂಬ ಬ್ರಾಹ್ಮಣನು ಇರುತ್ತಿದ್ದನು. ಅವನು ಚಿಕ್ಕ ಚಿಕ್ಕ ಪೌರೋಹಿತ್ಯ ಕೆಲಸಗಳನ್ನು ಮಾಡುತ್ತಾ ಸಮಯವನ್ನು ಕಳೆಯುತ್ತಿದ್ದನು. ಒಂದುಸಾರಿ ಒಬ್ಬರ ಮನೆಗೆ ಶ್ರೀ ಸತ್ಯನಾರಾಯಣ ಸ್ವಾಮಿಯ ವ್ರತವನ್ನು ಮಾಡಲು ಹೋದಾಗ, ಅವರ ಮನೆಯಲ್ಲಿ ಸಾಯಿನಾಥನ ಚಿತ್ರಪಟವನ್ನು ನೋಡಿದನು. ಆ ಚಿತ್ರಪಟವನ್ನು ತದೇಕವಾಗಿ ನೋಡುತ್ತಾ ಮೈಮರೆತನು. ಅವನ ಸಂತೋಷವನ್ನು ಗಮನಿಸಿದ ಆ ಮನೆಯ ಯಜಮಾನಿ, ಮನೆಯೊಳಗಿಂದ ಸಾಯಿನಾಥನ ಇನ್ನೊಂದು ಚಿತ್ರಪಟವನ್ನು ತಂದು ಅವನಿಗೆ ಕೊಟ್ಟಳು.

ಭಾನೋಜಿಯು ಇದಕ್ಕೆ ಮೊದಲು ಸಾಯಿನಾಥನ ಲೀಲೆಗಳ ಕುರಿತು ಕೇಳಿದನೇ ವಿನಃ, ಅವವನ್ನು ನೋಡಿರಲಿಲ್ಲ. ಆ ಭಾವಚಿತ್ರವನ್ನು ನೋಡಿದಷ್ಟು, ನೋಡುತ್ತಿರಬೇಕೆಂದು ಅನಿಸುತ್ತಿತ್ತು. ಆ ಸ್ವಾಮಿಯ ಕಣ್ಣುಗಳಲ್ಲಿ ಕರುಣಾರಸವು ತುಂಬಿ ತುಳುಕುತ್ತಿತ್ತು. ತನ್ನನ್ನೇ ಅತ್ಯಂತ ಪ್ರೇಮದಿಂದ ನೋಡುತ್ತಿರುವ ಹಾಗೆ ಭಾಸವಾಗುತ್ತಿತ್ತು. ಭಾನೋಜಿಗೆ ಆ ಭಾವಚಿತ್ರದಿಂದ ದೃಷ್ಟಿಯನ್ನು ಬೇರೆಕಡೆ ತಿರುಗಿಸಲು ಮನಸ್ಸುಕೇಳುತ್ತಿರಲಿಲ್ಲ. ಆ ಭಾವಚಿತ್ರವನ್ನು ತಂದು ಮನೆಯಲ್ಲಿ ಜಾಗ್ರತೆಯಾಗಿ ಇಟ್ಟುಕೊಂಡನು. ಪ್ರತಿದಿನ ಮುಂಜಾನೆ ಎಲ್ಲಾ ದೇವತೆಗಳೊಟ್ಟಿಗೆ ಸಾಯಿನಾಥನಿಗೆ ಕೂಡಾ ನಮಸ್ಕರಿಸುತ್ತಿದ್ದನು. ಯಾವಾಗಲಾದರೂ ಶಿರಡಿಗೆ ಹೋಗಿ, ಸಾಯಿನಾಥನ ದರ್ಶನವನ್ನು ಮಾಡಬೇಕೆಂದು ಮನಸ್ಸಿನಲ್ಲಿ ತುಂಬಾ ಆಸೆ ಇದ್ದೀತು.

ದಿನಾಲು ಅವರಿಂದ, ಇವರಿಂದ ಸಾಯಿನಾಥನ ಮಹಿಮೆಗಳನ್ನು ತುಂಬಾ ಕೇಳಿಸಿಕೊಳ್ಳುತ್ತಿದ್ದನು. 'ಸಾಯಿ ತತ್ವ'ಕ್ಕೆ ಬಹಳ ಆಕರ್ಷಿಸಲ್ಪಟ್ಟನು. ಪ್ರತಿನಿತ್ಯ ಆ ಸಾಯಿನಾಥನ್ನನ್ನೇ ಸ್ಮರಿಸುತ್ತಿದ್ದನು. ಆ ಸಾಯಿನಾಥನು ಪ್ರೇಮ ಸ್ವರೂಪನು. ಆ ಸ್ವಾಮಿಯು ತನ್ನನ್ನು ನಂಬಿದವರನ್ನು, ಪೂಜಿಸಿದವರನ್ನು ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುವ ಅಮೃತಮೂರ್ತಿ. ಸಾಯಿನಾಥನ ಕೃಪಾಕಟಾಕ್ಷದಿಂದ ಭಾನೋಜಿಯ ಜೀವಿತವು ಉತ್ತಮವಾಗಿ ಸಾಗುತ್ತಿತ್ತು. ಭಾನೋಜಿಯ ಹೆಂಡತಿ, ಇಬ್ಬರು ಕುಮಾರಿಯರು ಎಲ್ಲರು ನಿತ್ಯವೂ ಆ ಸ್ವಾಮಿನಾಥನನ್ನೇ ಸ್ಮರಿಸುತ್ತಾ ಸಮಯವನ್ನು ಕಳೆಯುತ್ತಿದ್ದರು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ಭಾನೋಜಿಗೆ ತೀವ್ರವಾದ ಹೊಟ್ಟೆನೋವು ಉಂಟಾಯಿತು. ಮನೆ ಹತ್ತಿರವಿರುವ ವೈದ್ಯನನ್ನು ಭೇಟಿಮಾಡಿದರೆ, ಯಾವುದೋ ಮದ್ದು ಕೊಟ್ಟು ಕಳುಹಿಸಿದನು. ಅದನ್ನು ತೆಗೆದುಕೊಂಡರೂ ಹೊಟ್ಟೆನೋವು ಕಡಿಮೆಯಾಗಲಿಲ್ಲ. 'ಸಾಯಿ! ನನ್ನನ್ನು ರಕ್ಷಿಸು. ಈ ನೋವನ್ನು ಪರಿಹರಿಸು ತಂದೆ' ಎಂದು ಆ ಸಾಯಿನಾಥನನ್ನು ಬೇಡಿಕೊಂಡನು.

ಮರುದಿನ ನೋವು ಮತ್ತಷ್ಟು ಹೆಚ್ಚಾಯಿತು. ಇನ್ನು ಲಾಭವಿಲ್ಲೆಂದು, ಆ ಊರಲ್ಲಿರುವ ರಾಮನಾಥನೆಂಬ ದೊಡ್ಡವೈದ್ಯನ ಹತ್ತಿರ ಹೋದನು. ರಾಮನಾಥನಿಗೆ ಚಿಕ್ಕ ಅನುಮತಿ ಪತ್ರವಿತ್ತು. ರಾಮನಾಥನು ಭೋನೋಜಿಯನ್ನು ಪರೀಕ್ಷಿಸಿ, ಕೂಡಲೇ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬರುತ್ತದೆಂದು ಹೇಳಿದನು. ಆದರೆ, ಈ ಶಸ್ತ್ರಚಿಕಿತ್ಸೆ ಮಾಡುವುದು ತನ್ನಿಂದ

ಆಗುವುದಿಲ್ಲವೆಂದು ಗುಲ್ಬರ್ಗದಲ್ಲಿ ತನಗೆ ಗೊತ್ತಿರುವ ವೈದ್ಯ ಪಳ್ನಿತ್ಕರ್.ಗೆ ದೂರವಾಣಿ ಕರೆ ಮಾಡುತ್ತೇನೆಂದು, ಅವನು ಎರಡು, ಮೂರು ಗಂಟೆಗಳಲ್ಲಿ ಬಂದು ಶಸ್ತ್ರಚಿಕಿತ್ಸೆ ಮಾಡುತ್ತಾನೆಂದು ಹೇಳಿದನು. ಅಲ್ಲಿಯವರೆಗೆ ಭಾನೋಜಿ ಕದಲದೇ ಮಲಗಿರಬೇಕೆಂದು ಹೇಳಿದನು. ಇದೆಲ್ಲಾ ಕೇಳಿದ ಭಾನೋಜಿಗೆ ಬಹಳ ಭಯವಾಯಿತು. ಗುಲ್ಬರ್ಗದಿಂದ ಆ ವೈದ್ಯನು ಯಾವಾಗ ಬರುತ್ತಾನೆ? ಶಸ್ತ್ರಚಿಕಿತ್ಸೆ ಯಾವಾಗ ಜರುಗುತ್ತದೆ? ಎಂದು ತುಂಬಾ ಆತಂಕ ಪಟ್ಟನು.

ಇಷ್ಟರಲ್ಲಿ ರಾಮನಾಥ ವೈದ್ಯನು ಬಂದು, ಗುಲ್ಬರ್ಗದ ವೈದ್ಯ ಪಳ್ನಿತ್ಕರ್.ಗೆ ದೂರವಾಣಿ ಕರೆ ಮಾಡಿದೆನೆಂದು, ನಾಲ್ಕೈದು ಗಂಟೆಯಲ್ಲಿ ಬರುತ್ತಾನೆಂದು ಹೇಳಿದನು. ಇಷ್ಟರಲ್ಲಿ ಶಸ್ತ್ರಚಿಕಿತ್ಸೆಯ ಎಲ್ಲಾ ಸಿದ್ಧತೆಗಳನ್ನು ತಾನು ಮಾಡಿರುತ್ತೇನೆಂದು, ಯಾವುದಕ್ಕೂ ಗಾಬರಿಯಾಗಬಾರದೆಂದು ಹೇಳಿದನು. ಭಾನೋಜಿಗೆ ನಿಮಿಷ ನಿಮಿಷಕ್ಕೆ ನೋವು ಜಾಸ್ತಿಯಾಗತೊಡಗಿತು. ಆ ವೈದ್ಯನು ಬರುವವರೆಗೆ ತನ್ನ ಪ್ರಾಣವಿರುತ್ತದಾ ಎಂದು ಭಯ ಹುಟ್ಟಿತು. ಹೆಂಡತಿ, ಮಕ್ಕಳಿಗೆ ಕೂಡಾ ತುಂಬಾ ಭಯವಾಯಿತು. ನಿಮಿಷ ನಿಮಿಷಕ್ಕೆ ಗಾಬರಿಯು ಜಾಸ್ತಿಯಾಗತೊಡಗಿತು. ಎರಡು ಗಂಟೆ ಕಳೆಯಿತು. ಹೊಟ್ಟೆನೋವು ಜಾಸ್ತಿಯಾಯಿತೇ ವಿನಃ ಸ್ವಲ್ಪವೂ ಕಡಿಮೆಯಾಗುತ್ತಿಲ್ಲ. ಭಾನೋಜಿಯು ಆಕಡೆ-ಈಕಡೆ ಹೋಗುತ್ತಿರುವ ವೈದ್ಯ ರಾಮನಾಥನ ಮುಖ ಕೂಡಾ ಗಾಬರಿಯಾಗಿರುವುದು ಗಮನಿಸಿದನು. ಇನ್ನು ತನ್ನನ್ನು ಆ ಸಾಯಿನಾಥನೇ ರಕ್ಷಿಸಬೇಕೆಂದು ಆಲೋಚಿಸಿ, ಆ ಸ್ವಾಮಿಯನ್ನೇ ಪ್ರಾರ್ಥಿಸತೊಡಗಿದನು. ನಾಲ್ಕು ಗಂಟೆಗಳು ಕಳೆಯಿತು. ಗುಲ್ಬರ್ಗದಿಂದ ಬರಬೇಕಾದ ವೈದ್ಯ ಪಳ್ನಿತ್ಕರ್.ನ ಸುಳಿವಿಲ್ಲ. ವೈದ್ಯ ರಾಮನಾಥನು ಬಹಳ ಗಾಬರಿಪಡುತ್ತಾ ಆಚೆಈಚೆ ಓಡಾಡುತ್ತಿದ್ದಾನೆ. ಇನ್ನು ಅರ್ಧಗಂಟೆಯಲ್ಲಿ ಶಸ್ತ್ರಚಿಕಿತ್ಸೆ ಮಾಡದೇ ಹೋದರೆ ಈ ಬ್ರಾಹ್ಮಣನಿಗೆ ಯಾವುದಾದರೂ ಅಪಾಯವಾಗಬಹುದೆಂದು ನೋಯುತ್ತಿದ್ದಾನೆ.

ಇಷ್ಟರಲ್ಲಿ ಆಸ್ಪತ್ರೆಯ ಹೊರಗೆ ಒಂದು ಕುದುರೆ ಬಂಡಿ ಬಂದು ನಿಂತಿತು. ಅದರೊಳಗಿನಿಂದ ಒಬ್ಬ ಆಕರ್ಷಕ ಕಾಂತಿಯಿಂದ ಬೆಳಗುತ್ತಿರುವ ವ್ಯಕ್ತಿಯು ಕೆಳಗಿಳಿದನು. ತನ್ನನ್ನು ಗುಲ್ಬರ್ಗದ ವೈದ್ಯ ಪಳ್ನಿತ್ಕರ್ ಕಳಿಹಿಸಿದರೆಂದು, ಅವರಿಗೆ ಯಾವುದೊ ತುರ್ತು ಶಸ್ತ್ರಚಿಕಿತ್ಸೆ ಇದ್ದುದರಿಂದ ಬರಲಾಗಲಿಲ್ಲವೆಂದು ಹೇಳಿದನು. ತನ್ನ ಹೆಸರು ವೈದ್ಯ ಕೃಷ್ಣ ರಾವ್ ಎಂದು ಹೇಳಿದನು. 'ಮೊದಲು ಒಳಗೆ ಹೋಗಿ, ಯಾವುದೇ ಆಲಸ್ಯಮಾಡದೇ ಶಸ್ತ್ರಚಿಕಿತ್ಸೆ ಮಾಡುವ' ಎಂದು ಹೇಳಿದನು. ಅವನ್ನನ್ನು ನೋಡಿದ ಭಾನೋಜಿ ಕುಟುಂಬಕ್ಕೆ ಹೋದ ಪ್ರಾಣ ತಿರುಗಿ ಬಂದಂತಾಯಿತು. ರಾಮನಾಥ ವೈದ್ಯನು ಬಂದು ಕೃಷ್ಣ ರಾವ್ ವೈದ್ಯನನ್ನು ಕರೆದುಕೊಂಡು ಶಸ್ತ್ರಚಿಕಿತ್ಸೆಯ ಕೊಠಡಿಯೊಳಗೆ ಹೋದನು. ಇಪ್ಪತ್ತು ನಿಮಿಷದಲ್ಲಿ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ಜರುಗಿತು. ಎಲ್ಲರು ಉಸಿರೆಳೆದುಕೊಂಡರು. ಗುಲ್ಬರ್ಗದಿಂದ ಬಂದ ಕೃಷ್ಣ ರಾವ್ ವೈದ್ಯನು ಕುದುರೆ ಬಂಡಿ ಹತ್ತಿ ಹೊರಟು ಹೋದನು.

ರಾಮನಾಥ ವೈದ್ಯನು ಭಾನೋಜಿಯ ಹತ್ತಿರ ಬಂದು ಎಲ್ಲಾ ಆ ಸಾಯಿನಾಥನ ದಯೆ ಎಂದು, ಸಮಯಕ್ಕೆ ಕೃಷ್ಣ ರಾವ್ ವೈದ್ಯನು ಬಂದಿದ್ದರಿಂದ ಭಾನೋಜಿಯು ದೊಡ್ಡ ಅಪಾಯದಿಂದ ಪಾರಾದನೆಂದು, ಇನ್ನು ಯಾವುದೇ ಗಾಬರಿ, ಆತಂಕಗಳು ಇಲ್ಲವೆಂದು ಹೇಳಿದನು. ಭಾನೋಜಿಯ ಹೆಂಡತಿಗೆ ಕೂಡ ಇದನ್ನೇ ಹೇಳಿದನು. ಆ ಕುಟುಂಬವು ಸಾಯಿನಾಥನಿಗೆ

ಮನಸ್ಸಿನಲ್ಲೇ ಅನೇಕ ವಿಧಗಳಿಂದ ನಮಸ್ಕರಿಸಿದರು. ನಾಳೆ ಬೆಳಗ್ಗಿನವರೆಗೆ ವಿಶ್ರಾಂತಿಯನ್ನು ತೆಗೆದುಕೊಳ್ಳೆಂದು ಹೇಳಿ ರಾಮನಾಥ ವೈದ್ಯನು ಹೊರಟು ಹೋದನು.

ಇಷ್ಟರಲ್ಲಿ ಒಂದು ಗಂಟೆ ಕಳೆಯಿತು. ಆಸ್ಪತ್ರೆಯ ಒಳಗೆ, ಒಂದು ಚೀಲ ಹಿಡಿದುಕೊಂಡು ಉಸಿರಿಡಿದು ಓಡುತ್ತಾ ಒಬ್ಬ ವ್ಯಕ್ತಿಯು ಬಂದನು. ತಾನು ವೈದ್ಯ ಪಳ್ನಿತ್ಕರ್ ಎಂದು ಗುಲ್ಬರ್ಗದಿಂದ ಶಸ್ತ್ರಚಿಕಿತ್ಸೆ ಮಾಡಲು ಬಂದೆನೆಂದು ಹೇಳಿದನು. ಬಂದಕೂಡಲೇ ರಾಮನಾಥ ವೈದ್ಯನೊಟ್ಟಿಗೆ 'ನಾನು ಬರುತ್ತಿರುವ ಬಸ್ಸು ದಾರಿಮಧ್ಯದಲ್ಲಿ ಚಿಕ್ಕ ಪ್ರಮಾದಕ್ಕೆ ಸಿಲುಕಿ, ಇಷ್ಟು ತಡವಾಯಿತು. ಆ ರೋಗಿಯು ಹೇಗೆ ಇದ್ದಾನೋ ಎಂದು ಗಾಬರಿಯಾಗಿದೆ. ವೈದ್ಯರೇ ಹೊರಡಿ, ಶಸ್ತ್ರಚಿಕಿತ್ಸೆ ಮಾಡುವ' ಎಂದು ರಾಮನಾಥನಿಗೆ ಹೇಳಿದನು.

ರಾಮನಾಥನು ಬಹಳ ಆಶ್ಚರ್ಯದಿಂದ, ಇದೇನು ವೈದ್ಯರೇ! ಇದಕ್ಕೆಮೊದಲು ನಿಮ್ಮ ಆಸ್ಪತ್ರೆಯಿಂದ ಕೃಷ್ಣ ರಾವ್ ವೈದ್ಯರು ಬಂದು ಹೋದರಲ್ವ? ಎಂದು ಹೇಳಿದನು. ಈಗ ಆಶ್ಚರ್ಯಪಡುವ ಸರದಿ ಪಳ್ನಿತ್ಕರ್.ನದಾಯಿತು. 'ಅದೇನು ವೈದ್ಯ ಮಹಾಶಯರೇ! ನನಗೆ ಕೃಷ್ಣ ರಾವ್ ಎಂಬ ವೈದ್ಯರು ಯಾರೂ ಕೂಡ ಪರಿಚಯವಿಲ್ಲ. ನನ್ನ ಹತ್ತಿರವೇ ಅಲ್ಲ, ಇಡೀ ಗುಲ್ಬರ್ಗದಲ್ಲಿಯೇ ಆ ಹೆಸರಿರುವ ವೈದ್ಯರು ಯಾರೂ ಇಲ್ಲ!' ಆಗ ನಡೆದ ವಿಷಯವು ಎಲ್ಲರಿಗೂ ಅರ್ಥವಾಯಿತು. ತನ್ನನ್ನು ನಂಬಿದ ಭಾನೋಜಿ ಭಕ್ತನನ್ನು ರಕ್ಷಿಸಲು ಸ್ವಯಂ ಆಗಿ ಸಾಯಿನಾಥನೇ ವೈದ್ಯನ ರೂಪದಲ್ಲಿ ಬಂದದ್ದು. ಈ ವಿಷಯವನ್ನು ತಿಳಿದ ಅವರೆಲ್ಲರೂ ಸಾಯಿನಾಥನಿಗೆ ತನ್ನ ಭಕ್ತರ ಮೇಲಿರುವ ಪ್ರೇಮಕ್ಕೆ ತುಂಬಾ ಆನಂದಪಟ್ಟರು. ಸಂತೋಷದಿಂದ ಅವರ ಕಣ್ಣುಗಳು ಒದ್ದೆಯಾದವು.

ಆವತ್ತಿನಿಂದ ಅವರೆಲ್ಲರೂ ಸಾಯಿನಾಥನ ಭಕ್ತರಾಗಿ ಪ್ರತಿ ಗುರುವಾರ ಬಹಳ ಅದ್ಭುತವಾಗಿ ಸಾಯಿನಾಥನ ಭಜನೆಗಳನ್ನು ಮಾಡುತ್ತಿದ್ದರು. ಭಾನೋಜಿಯ ಕುಟುಂಬವೆಲ್ಲಾ ಜೀವಿಸಿದಷ್ಟು ದಿನ ಸಾಯಿನಾಥನ ಸೇವೆಮಾಡುತ್ತಾ ಅತ್ಯಂತ ಸುಖದಿಂದ ಜೀವಿಸಿದರು.

ಸಾಯಿನಾಥನು ಅತ್ಯಂತ ಕರುಣಾಮೂರ್ತಿ. ಆ ಶಿರಡಿ ಸಾಯಿನಾಥನನ್ನು ನಂಬಿದವರಿಗೆ ಯಾವುದೇ ಆಪತ್ತುಗಳು ಉಂಟಾಗುವುದಿಲ್ಲ. ಕೈಹಿಡಿದ ಎಲ್ಲಾ ಕೆಲಸಗಳಲ್ಲೂ ಜಯವು ದೊರಕುತ್ತದೆ. ಜೀವನದಲ್ಲಿ ಸಮಸ್ತ ಶ್ರೇಯಸ್ಸುಗಳು ಉಂಟಾಗುತ್ತದೆ. ಆ ಸಾಯಿನಾಥನನ್ನು ನಿತ್ಯವೂ ಪೂಜಿಸುವವರನ್ನು ಆ ಅಮೃತಮುರ್ತಿಯು ಯಾವಾಗಲೂ ಕಾಪಾಡುತ್ತಿರುತ್ತಾನೆ. ಅವರ ಯೋಗಕ್ಷೇಮವನ್ನೆಲ್ಲಾ ಅವನೇ ವಹಿಸಿಕೊಳ್ಳುತ್ತಾನೆ. ಆ ಸಾಯಿನಾಥನು ಅಂಥಹ ಕರುಣಾಮೂರ್ತಿ.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ಸಮರ್ಥ ಸದ್ಗುರು ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿದೇವಾಯ ನಮಃ ||

*******

## ಮೂರನೇ ಅಧ್ಯಾಯ

# ಪಂಡಿತ ರಾಮ ಶಾಸ್ತ್ರಿ ಕಥೆ

ಪೂರ್ವಕಾಲದಲ್ಲಿ ಬಿಜಾಪುರ ಪಟ್ಟಣಕ್ಕೆ ಮೂವತ್ತು ಮೈಲು ದೂರದಲ್ಲಿ ಚಿತ್ರಾಪುರದಲ್ಲಿ ಪಂಡಿತ ರಾಮ ಶಾಸ್ತ್ರಿ ಎಂಬ ಪುರೋಹಿತನು ಇದ್ದನು. ಅವನೆಷ್ಟೋ ನಿಯಮ ನಿಷ್ಠೆಗಳಿಂದ ಜೀವಿಸುತ್ತಾ ಆ ಸುತ್ತಮುತ್ತಲ್ಲಿರುವ ಊರಲ್ಲಿ ಪೌರೋಹಿತ್ಯವನ್ನು ನಿರ್ವಹಿಸುತ್ತಾ ಸಮಯ ಕಳೆಯುತ್ತಿದ್ದನು. ಯಾರನ್ನು ಇಷ್ಟು ಹಣ ಕೊಡಿರೆಂದು ಒತ್ತಾಯಮಾಡದೆ ಅವರು ಕೊಟ್ಟದ್ದರಲ್ಲಿ ಸಂತೃಪ್ತಿಯಾಗಿರುತ್ತಿದ್ದನು. ಅವನ ಹೆಂಡತಿ ರುಕ್ಮಿಣಿಯು ಕೂಡಾ ಪತಿಗೆ ತಕ್ಕ ಪತ್ನಿಯಾಗಿದ್ದಳು. ಅವರಿಗೆ ವಿವಾಹವಾಗಿ ಆರು ವರುಷವಾದರೂ ಸಂತಾನಭಾಗ್ಯವಿಲ್ಲದ್ದು, ಅಸಂತೃಪ್ತಿಯಾಗಿತ್ತು.

ಸಂತಾನಕ್ಕಾಗಿ ಪಂಡಿತ ರಾಮ ಶಾಸ್ತ್ರಿ ದಂಪತಿಗಳಿಬ್ಬರೂ ಮಾಡದ ವ್ರತವಿರಲಿಲ್ಲ, ಆರಾಧಿಸದ ದೇವರಿಲ್ಲ. ಆದರೂ ಯಾಕೋ ಅವರಿಗೆ ಸಂತಾನಭಾಗ್ಯ ಪ್ರಾಪ್ತವಾಗಲಿಲ್ಲ. ಇನ್ನು ತಮಗೆ ಈ ಜನ್ಮದಲ್ಲಿ ಸಂತಾನಭಾಗ್ಯದ ಪ್ರಾಪ್ತಿಯಿಲ್ಲವೆಂದು ನೋಯುತ್ತಿದ್ದರು. ಒಂದುದಿನ ರಾಮ ಶಾಸ್ತ್ರಿಯು ಯಾವುದೊ ಕಾರ್ಯಕ್ರಮದ ನಿಮಿತ್ತ ನಡೆದುಕೊಂಡು ಪಕ್ಕದ ಊರಿಗೆ ಹೋಗುತ್ತಿರುವಾಗ, ಒಬ್ಬ ಫಕೀರನು ಎದುರಾದನು. ಅವನನ್ನು ದಾಟಿ ಮುಂದಕ್ಕೆ ಹೋಗುತ್ತಿರುವ ರಾಮ ಶಾಸ್ತ್ರಿಯನ್ನು ತಡೆದು, ಆ ಫಕೀರನು ಹೀಗೆ ಹೇಳಿದನು. 'ತಮ್ಮಾ! ನಿನಗೆ ಸಂತಾನವಿಲ್ಲವೆಂದು ತುಂಬಾ ನೋವುಂಟಲ್ವಾ?' ಎಂದು ಹೇಳಿದನು. ನೀನು 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ಮಾಡು. ತಪ್ಪದೆ ನಿನಗೆ ಸ್ವಲ್ಪ ಸಮಯದಲ್ಲೇ ಸಂತಾನಭಾಗ್ಯವು ಉಂಟಾಗುತ್ತದೆ' ಎಂದು ಹೇಳಿದನು. ಇದನ್ನು ಕೇಳಿದ ರಾಮ ಶಾಸ್ತ್ರಿಯು ತುಂಬಾ ಆಶ್ಚರ್ಯಪಟ್ಟನು. ತನಗೆ ಸಂತಾನವಿಲ್ಲದ ವಿಷಯವು ಈ ಸಾಧುವಿಗೆ ಹೇಗೆ ತಿಳಿಯಿತೆಂದು ಆಲೋಚಿಸಿದನು. ಕೂಡಲೇ ಆ ಫಕೀರನಿಗೆ ನಮಸ್ಕರಿಸಿ, ಆ ವ್ರತ ವಿಧಾನವನ್ನು ಹೇಳೆಂದನು. ಆ ಫಕೀರನು 'ಶ್ರೀ ಸಾಯಿ ರಕ್ಷಾ ವ್ರತ' ವಿಧಾನವನ್ನು ವಿವರವಾಗಿ ತಿಳಿಸಿದನು. ಇದು ಬಹಳ ಸುಲಭವಾದದ್ದು, ಆಚರಿಸಿದ ಕೂಡಲೇ ಒಳ್ಳೆಯ ಫಲಿತವಿರುತ್ತದೆಂದು ಹೇಳಿದನು. ಆ ಫಕೀರನು ಇನ್ನೊಂದು ವಿಷಯವನ್ನು ಕೂಡಾ ಹೇಳಿದನು. 'ತಮ್ಮಾ! ರಾಮ ಶಾಸ್ತ್ರಿ! ಸಾಯಿನಾಥನಿಗೆ ತನ್ನ ಭಕ್ತರೆಂದರೆ ಬಹಳ ಅಭಿಮಾನ. ನಿಮ್ಮೆಲ್ಲರನ್ನು ತನ್ನ ಸ್ವಂತ ಮಕ್ಕಳಹಾಗೆ ಭಾವಿಸುತ್ತಾನೆ. ನಿಮ್ಮ ಯೋಗಕ್ಷೇಮಗಳನ್ನು ಯಾವಾಗಲೂ ಗಮನಿಸುತ್ತಿರುತ್ತಾನೆ. ಈ ವ್ರತವನ್ನು ಶುದ್ಧ ಮನಸ್ಸಿನಿಂದ ಆಚರಿಸಿದರೆ, ವ್ರತವು ಪೂರ್ತಿಯಾದಾಗ ಆ ಸಾಯಿನಾಥನು ಯಾವುದೊ ಒಂದು ರೂಪದಲ್ಲಿ ನಿಮ್ಮ ಮನೆಗೆ ಬಂದು, ಅವನು ಕೂಡಾ ಪ್ರಸಾದವನ್ನು ಸ್ವೀಕರಿಸುತ್ತಾನೆ. ನಿಮಗೆ ತಿಳಿದ ಬಂಧುಗಳ ರೂಪದಲ್ಲೋ ಅಥವಾ ಯಾರೋ ಅಪರಿಚಿತವ್ಯಕ್ತಿಯ ರೂಪದಲ್ಲೋ ಇಲ್ಲದಿದ್ದರೆ ಸಾಕುಪ್ರಾಣಿಯ ರೂಪದಲ್ಲೋ, ಯಾವುದೋ ಕ್ರಿಮಿಕೀಟದ ರೂಪದಲ್ಲೋ, ಪಕ್ಷಿಯ ರೂಪದಲ್ಲೋ ಹೀಗೆ ಯಾವುದೋ ಒಂದು ರೂಪದಲ್ಲಿ ಬಂದು ಪ್ರಸಾದವನ್ನು ತಪ್ಪದೆ ಸ್ವೀಕರಿಸುತ್ತಾನೆ. ಅತ್ಯಂತ ಶುದ್ಧ ಮನಸ್ಸಿನಿಂದ ಆ ಸಾಯಿನಾಥನನ್ನೇ ಸ್ಮರಿಸುತ್ತಾ ವ್ರತವನ್ನು ಮಾಡಿದವರ ಮನೆಗೆ ತಾನು ತಪ್ಪದೆ ಬಂದು ಪ್ರಸಾದವನ್ನು ಸ್ವೀಕರಿಸುತ್ತಾನೆ' ಎಂದು ಹೇಳಿದನು.

ರಾಮ ಶಾಸ್ತ್ರಿ ಆ ಸಾಧುವಿಗೆ ನಮಸ್ಕರಿಸಿ ಮುಂದಕ್ಕೆ ಸಾಗಿ ಪಕ್ಕದ ಊರಿಗೆ ಹೋಗಿ, ಅಲ್ಲಿ ಜರುಗುವ ನಾಮಕರಣ ಮಹೋತ್ಸವವನ್ನು ಸುಂದರವಾಗಿ ಮಾಡಿದನು. ಆ ದಿನ

ಯಾವಾಗಲೂ ಸಿಗುವದಕ್ಕಿಂತ ಜಾಸ್ತಿ ಸಂಭಾವನೆ ಸಿಕ್ಕಿತು. ಮರಳಿ ಮನೆಗೆ ಬಂದ ಕೂಡಲೇ ಹೆಂಡತಿ ರುಕ್ಮಿಣಿಗೆ, ಫಕೀರನು ತನ್ನನ್ನು ಭೇಟಿಯಾಗುವುದು, 'ಶ್ರೀ ಸಾಯಿ ರಕ್ಷಾ ವ್ರತ' ವಿಧಾನವನ್ನು ಹೇಳುವುದನ್ನು ವಿವರಿಸಿದನು. ಅವಳು ಕೂಡಾ ತುಂಬಾ ಸಂತೋಷಪಟ್ಟಳು. ಆ ಸಾಯಿನಾಥನೇ ತಮ್ಮನ್ನು ಅನುಗ್ರಹಿಸುವುದಕ್ಕಾಗಿ ಆ ಫಕೀರನ ರೂಪದಲ್ಲಿ ಬಂದನೆಂದು ರಾಮ ಶಾಸ್ತ್ರಿ ದಂಪತಿಗಳು ಭಾವಿಸಿದರು. ಮರುದಿನವೇ ಅವರ ಬಂಧುಮಿತ್ರರನ್ನು, ಅಕ್ಕಪಕ್ಕದವರನ್ನೆಲ್ಲಾ ಕರೆದು ಬಹಳ ಭಕ್ತಿಯಿಂದ ಉತ್ತಮವಾಗಿ ಆ ಸಾಯಿನಾಥನನ್ನೇ ಸ್ಮರಿಸುತ್ತಾ 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ಆಚರಿಸಿದರು. ಆ ವ್ರತದ ಫಲಿತವಾಗಿ ನಂತರದ ಮಾಸದಲ್ಲೇ ರುಕ್ಮಿಣಿಯು ಗರ್ಭಧರಿಸಿ ಮುತ್ತಿನಂತಹ ಮಗನನ್ನು ಹಡೆದಳು.  ಸಾಯಿನಾಥನ ಅನುಗ್ರಹದಿಂದ ಹುಟ್ಟಿದವನಾದ್ದರಿಂದ ಸಾಯಿರಾಂ ಎಂದೇ ಹೆಸರಿಟ್ಟರು. ಸಾಯಿರಾಂ ಬೆಳೆದು ದೊಡ್ಡವನಾಗಿ ಐದನೇ ತರಗತಿಗೆ ಬಂದನು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ರಾಮ ಶಾಸ್ತ್ರಿಗೆ ಬಿಜಾಪುರದಿಂದ ಆ ಶನಿವಾರದ ದಿನ ಒಬ್ಬ ಶ್ರೀಮಂತನ ಮನೆಯಲ್ಲಿ ಅನ್ನಪ್ರಾಶನ ಕಾರ್ಯಕ್ರಮವನ್ನು ನಿರ್ವಹಿಸಬೇಕೆಂದು ಕರೆ ಬಂತು. ಆ ದಿನಗಳಲ್ಲಿ ಇವರ ಊರಿನ ಮೇಲಿಂದ ಬಿಜಾಪುರಕ್ಕೆ ಹೋಗಲು ಮುಂಜಾನೆ ಆರು ಗಂಟೆಗೆ ಒಂದು ಬಸ್ಸು ಇತ್ತು. ಆನಂತರ ಪುನಃ ಸಾಯಂಕಾಲ ಅದೇ ಬಸ್ಸು ತಿರುಗಿ ಈ ಊರಿನ ಮೇಲಿಂದ ಹಾದುಹೋಗುತ್ತಿತ್ತು. ಶನಿವಾರದ ದಿನ ಬಂದಾಗ, ರಾಮ ಶಾಸ್ತ್ರಿಯು ಮುಂಜಾನೆದ್ದು ಸಂಧ್ಯಾವಂದನ ನಿತ್ಯವಿಧಿಗಳನ್ನು ಮುಗಿಸಿ, ಬೇಕಾದ ಸಾಮಾನುಗಳನ್ನು ಚೀಲದಲ್ಲಿ ಇಟ್ಟುಕೊಂಡು ಐದು ಗಂಟೆಗೆ ಮನೆಯಿಂದ ಹೊರಟನು. ಬಿಜಾಪುರದ ಬಸ್ಸು ಊರಹೊರಗಿರುವ ರಸ್ತೆಯ ಮೇಲೆ ನಿಲ್ಲುತ್ತದೆ. ಅಲ್ಲಿಗೆ ಊರಿನಿಂದ ಕಾಲ್ನಡಿಗೆಯಲ್ಲಿ ಒಂದು ಅರ್ಧ ಗಂಟೆಯ ಸಮಯ. ರಾಮ ಶರ್ಮನು ಚೀಲವನ್ನು ಭುಜದ ಮೇಲೆ ಹಾಕಿಕೊಂಡು ಬೇಗಬೇಗನೇ ನಡೆಯತೊಡಗಿದನು.

ಸ್ವಲ್ಪದೂರ ಹೋದಾಗ, ಆ ದಿನ ಕಾಣಿಸಿದ ಸಾಧುವು ಪುನಃ ಕಾಣಿಸಿದನು. ರಾಮ ಶಾಸ್ತ್ರಿಯು ಕೂಡಲೇ ಅವನಿಗೆ ನಮಸ್ಕರಿಸಿ, ಆ ಸ್ವಾಮಿಯು ಹೇಳಿದ ಹಾಗೆ 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ತಾನು ಮಾಡಿದ್ದು, ಮಗನು ಹುಟ್ಟಿದನೆಂದು ಹೇಳಿದನು. ತಾನು ಬೇಗನೆ ಹೋಗಬೇಕೆಂದು ಹೇಳಿ ಆ ಫಕೀರನಿಗೆ ನಮಸ್ಕರಿಸಿ ಮುಂದಕ್ಕೆ ನಡೆದನು. ಆದರೆ, ಆ ಫಕೀರನು ರಾಮ ಶಾಸ್ತ್ರಿಯನ್ನು ನಿಲ್ಲಿಸಿ, ಆ ದಿನ ವ್ರತವು ಹೇಗೆ ಜರುಗಿತು? ಪ್ರತಿ ಸಂವತ್ಸರವೂ ವ್ರತವನ್ನು ಮಾಡುತ್ತಿದ್ದೀರಾ? ಮಗನಿಗೆ ಏನು ಹೆಸರಿಟ್ಟಿದ್ದೀರಿ? ಹೀಗೆ ಒಂದರಮೇಲೊಂದು ಅನೇಕ ಪ್ರಶ್ನೆಗಳನ್ನು ಕೇಳಿದನು. ರಾಮ ಶಾಸ್ತ್ರಿಯು ಎಲ್ಲದಕ್ಕೂ ಸಮಾಧಾನ ಕೊಟ್ಟನು. ಮನಸ್ಸಿನಲ್ಲಿ ಒಂದುಕಡೆ ಆ ಬಸ್ಸು ಎಲ್ಲಿ ತಪ್ಪಿಹೋಗುತ್ತದೋ ಎಂದು ಗಾಬರಿಯಾಗಿತ್ತು. ಅದರಲ್ಲೂ ಬಿಜಾಪುರದ ಶ್ರೀಮಂತನ ಮನೆಯಲ್ಲಿ ಕಾರ್ಯಕ್ರಮ. ಸಾಮಾನ್ಯಕ್ಕಿಂತ ನಾಲ್ಕು ರೂಪಾಯಿಗಳ ಸಂಭಾವನೆ ಜಾಸ್ತಿ ಸಿಗುತ್ತದೆಂದು ಆಲೋಚನೆ. ಈ ಫಕೀರನು ಮಾತ್ರ ತನ್ನನ್ನು ಬಿಡುತ್ತಿಲ್ಲ. ಒಂದು ಪ್ರಶ್ನೆಗೆ ಸಮಾಧಾನ ಹೇಳಿದರೆ, ಕೂಡಲೇ ಇನ್ನೊಂದು ಪ್ರಶ್ನೆಯನ್ನು ಕೇಳುತ್ತಿದ್ದಾನೆ. ರಾಮ ಶಾಸ್ತ್ರಿಗೆ ಸ್ವಲ್ಪ ಕಿರಿಕಿರಿ ಅನಿಸಿತು. ಈ ವಿಧವಾಗಿ ಇಪ್ಪತ್ತು ನಿಮಿಷಗಳು ಕಳೆಯಿತು. ಆಗ ಆ ಫಕೀರನು ರಾಮ ಶಾಸ್ತ್ರಿಯನ್ನು ಬಿಟ್ಟು, ಮಂದಹಾಸಪೂರ್ಣಮುಖದಿಂದ ಹೊರಟು ಹೋದನು.

ರಾಮ ಶಾಸ್ತ್ರಿಯು ನಡಿಗೆಯ ವೇಗವನ್ನು ಹೆಚ್ಚಿಸಿ ಬೇಗಬೇಗ ನಡೆಯುತ್ತಾ ಊರಹೊರಗಿನ ರಸ್ತೆಗೆ ಬಂದನು. ಒಂದುಕ್ಷಣ ರಸ್ತೆಯ ಹತ್ತಿರ ಸೇರುತ್ತಿರುವಾಗ, ತಾನು ಹತ್ತಬೇಕಾದ ಬಿಜಾಪುರ ಬಸ್ಸು ಹೊರಟುಹೋಗುತ್ತಿರುವುದು ಕಾಣಿಸಿತು. ರಾಮ ಶಾಸ್ತ್ರಿಯು ಬಹಳ ನಿರಾಶೆ ಹೊಂದಿದನು. ರಾಮ ರಾಮ! ಇನ್ನು ಆ ಕಾರ್ಯಕ್ರಮಕ್ಕೆ ಹೋಗಲಾವುದಿಲ್ಲ ಎಂದು ಚಿಂತಿಸಿದನು. ಆ ಫಕೀರನು ಕಾಣಿಸಿದ್ದರಿಂದ ಏನೋನೋ ಮಾತಾಡುತ್ತಿದ್ದುದರಿಂದ ಇಷ್ಟು ತಡವಾದುದರಿಂದ, ಈ ಬಸ್ಸು ತಪ್ಪಿಹೋಯಿತು. ಬಿಜಾಪುರದಲ್ಲಿ ಆ ಧನವಂತನು ಎಷ್ಟು ಹಣಕೊಡುತ್ತಿದ್ದನೋ ಎಂದು ಭಾವಿಸುತ್ತಾ, ನಿರಾಶೆ ನಿಸ್ಪೃಹೆಗಳಿಂದ ಹಿಂದಿರುಗಿದನು. ಮನೆಗೆ ಬಂದು ಹೆಂಡತಿಗೆ ಜರುಗಿದ ಸಂಗತಿಯನ್ನೆಲ್ಲಾ ಹೇಳಿದನು. ಇಷ್ಟರಲ್ಲಿ ಬೆಳಗಿನ ಹತ್ತು ಗಂಟೆಯ ಸಮಯವಾಯಿತು. ಅಷ್ಟರಲ್ಲಿ ಪಕ್ಕದ ಮನೆಯಿಂದ ಅಳುವ ಧ್ವನಿ ಕೇಳಿಬಂತು. ಏನೆಂದು ಹೋಗಿ ನೋಡಿದನು. ತಾನು ಹತ್ತಬೇಕೆಂದಿದ್ದ ಬಸ್ಸು, ಊರ ಹೊರಗಿನ ಪಕ್ಕದ ಕಾಲುವೆಗೆ ಬಿದ್ದು, ಹತ್ತಿರತ್ತಿರ ಹತ್ತುಜನರು ಅಲ್ಲಿಗಲ್ಲಿಗೆ ಪ್ರಾಣಬಿಟ್ಟರೆಂದು, ಕೆಲವು ಜನರು ತೀವ್ರವಾಗಿ ಗಾಯಗೊಂಡಿದ್ದಾರೆಂದು ತಿಳಿಯಿತು. ಪಕ್ಕದ ಮನೆಯವರ ಮಗನು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾನೆಂದು ಇವರಿಗೆ ವಿಷಯ ತಿಳಿಯಿತು. ಇದನ್ನು ಕೇಳಿ ಈ ಕುಟುಂಬವೆಲ್ಲ ತುಂಬಾ ಆತಂಕಗೊಂಡರು.

ರಾಮ ಶಾಸ್ತ್ರಿ ದಂಪತಿಗಳಿಗೆ ಜರುಗಿದ ವಿಷಯವೆಲ್ಲಾ ಅರ್ಥವಾಯಿತು. ಫಕೀರನ ರೂಪದಲ್ಲಿ ಬಂದು, ತನ್ನನ್ನು ಆ ಅಪಾಯದಿಂದ ಕಾಪಾಡಿದ್ದು ಆ ಸಾಯಿನಾಥನೆಂದು ತಿಳಿದನು. ತನ್ನನ್ನು ಆ ಬಸ್ಸಿನ ಪ್ರಮಾದದಿಂದ ತಪ್ಪಿಸಲು, ತನ್ನ ದಾರಿಗೆ ಅಡ್ಡ ಬಂದು, ಅನೇಕ ಪ್ರಶ್ನೆಗಳನ್ನು ಕೇಳಿ ಅಷ್ಟು ಹೊತ್ತು ತನ್ನನ್ನು ನಿಲ್ಲಿಸಿದನೆಂದು ಭಾವಿಸಿದನು. ಸಾಯಿನಾಥಾ! ನೀನೆಷ್ಟು ಕರುಣಾಮಯನು ತಂದೇ. ನಿನ್ನನ್ನು ಅನ್ಯಾಯವಾಗಿ ನಿಂದಿಸಿದೆನು. ನನ್ನ ಪ್ರಾಣವನ್ನು ಕಾಪಾಡುವುದಕ್ಕಾಗಿ ನನ್ನನ್ನು ಮುಂದೆ ಹೋಗದ ಹಾಗೆ ತಡೆದಿದ್ದಿ. ನಿನ್ನನ್ನು ದಣಿಸಿದ್ದಕ್ಕಾಗಿ ಕ್ಷಮಿಸು ತಂದೇ. ನನ್ನ ಅಪರಾಧವನ್ನು ಮನ್ನಿಸೆಂದು ಆ ದಂಪತಿಗಳು ಸಾಯಿನಾಥನನ್ನು ಅನೇಕ ವಿಧಗಳಿಂದ ಬೇಡಿಕೊಂಡರು.

ಅಂದಿನಿಂದ ಪ್ರತಿ ಗುರುವಾರದ ದಿನ ಆ ದಂಪತಿಗಳಿಬ್ಬರೂ 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ಆಚರಿಸುತ್ತಾ, ಯಾವಾಗಲೂ ಸಾಯಿನಾಥನ ಸೇವೆಯನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದರು. ಜೀವಿಸಿದಷ್ಟು ದಿನ ಸುಖವಾಗಿ ಜೀವಿಸಿ, ಕೊನೆಗೆ ಆ ಸಾಯಿನಾಥನಲ್ಲಿ ಐಕ್ಯವಾದರು. ಶಿರಡಿ ಸಾಯಿನಾಥನು ಅಂಥಹ ಅಮೃತಮೂರ್ತಿ. ಪ್ರತಿದಿನ ಭಕ್ತಿಯಿಂದ ಒಂದುಸಾರಿಯಾದರೂ ಸಾಯಿನಾಮವನ್ನು ಸ್ಮರಣೆ ಮಾಡಿದರೆ ಸಾಕು, ಆ ಸ್ವಾಮಿಯು ತಪ್ಪದೆ ಆ ಕುಟುಂಬವನ್ನು ರಕ್ಷಿಸುತ್ತಾನೆ. ಯಾವುದೇ ರೀತಿಯ ಅಪಾಯಗಳು ಬಾರದಂತೆ ಕಾಪಾಡುತ್ತಾನೆ. ಜೀವನವು ಶುಭಪ್ರದವಾಗಿ ನಡೆಯುವಂತೆ ಅನುಗ್ರಹಿಸುತ್ತಾನೆ.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ಸಮರ್ಥ ಸದ್ಗುರು ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿದೇವಾಯ ನಮಃ ||

*******

ನಾಲ್ಕನೇ ಅಧ್ಯಾಯ

# ಆನಂದ ರಾವ್ ಕಥೆ

ಹಿಂದಿನಕಾಲದಲ್ಲಿ ಮಹಾರಾಷ್ಟ್ರದಲ್ಲಿ ಶೋಲಾಪುರಕ್ಕೆ ನಲವತ್ತು ಮೈಲು ದೂರದಲ್ಲಿ ಒಂದು ಹಳ್ಳಿಯಿತ್ತು. ಆ ಊರಲ್ಲಿ ಆನಂದ ರಾವ್ ಎಂಬ ನೇಕಾರನು (ಬಟ್ಟೆ ನೇಯ್ಗೆಯವನು) ಇದ್ದನು. ಆ ಬೀದಿ ಪೂರ್ತಿ ಆನಂದ ರಾವ್ ಅಣ್ಣತಮ್ಮಂದಿರ ಕುಟುಂಬದವರೇ ವಾಸಿಸುತ್ತಿದ್ದರು. ಎಲ್ಲರೂ ಬಟ್ಟೆ ನೇಯ್ಗೆಯ ವೃತ್ತಿಯಲ್ಲೇ ಇದ್ದರು.

ಆನಂದ ರಾವ್ ದಂಪತಿಗಳ ಜೀವನವು ಸರಾಗವಾಗಿ ನಡೆಯುತ್ತಿದ್ದರೂ, ಸಂತಾನಭಾಗ್ಯವಿಲ್ಲದ್ದು ಕೊರತೆಯಾಗಿತ್ತು. ಉಳಿದ ಎಲ್ಲಾ ಅಣ್ಣತಮ್ಮಂದಿರಿಗೆ ಮಕ್ಕಳಾದರೂ ಇವರಿಗೆ ಮಾತ್ರ ವಿವಾಹವಾಗಿ ಒಂಬತ್ತು ಸಂವತ್ಸರಗಳಾದರೂ ಇನ್ನೂ ಸಂತಾನಭಾಗ್ಯವಿರಲಿಲ್ಲ. ಸಂತಾನಕ್ಕಾಗಿ ಎಷ್ಟೋ ಪೂಜೆಪುನಸ್ಕಾರಗಳು, ವ್ರತಗಳನ್ನು ಮಾಡಿದರೂ ಯಾವುದೇ ಫಲಿತ ಉಂಟಾಗಲಿಲ್ಲ. ಒಂದುದಿನ ಅವರಿಗೆ ಅಹ್ಮದ್ ನಗರದಿಂದ ಬಂದ ಒಬ್ಬ ವ್ಯಾಪಾರಿಯ ಮುಖಾಂತರ 'ಶ್ರೀ ಸಾಯಿ ರಕ್ಷಾ ವ್ರತ'ದ ಕುರಿತು ತಿಳಿಯಿತು. ಆ ವಾರದಲ್ಲಿ ಬಂದ ಗುರುವಾರದ ದಿನವೇ ಆನಂದ ರಾವ್ ದಂಪತಿಗಳು 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ಆಚರಿಸಿದರು. ಸಾಯಿನಾಥನನ್ನು ಸ್ಮರಿಸುತ್ತಾ ತಮಗೆ ಸಂತಾನಭಾಗ್ಯವನ್ನು ಪ್ರಸಾದಿಸಬೇಕೆಂದು ಬೇಡಿಕೊಂಡರು. ಭಕ್ತವತ್ಸಲನಾದ ಸಾಯಿನಾಥನ ಅನುಗ್ರಹದಿಂದ ಅವರಿಗೆ ಮುದ್ದಾದ ಮಗನು ಹುಟ್ಟಿದನು. ಅವನಿಗೆ ಸಾಯಿಕೃಷ್ಣ ಎಂದು ಹೆಸರಿಟ್ಟರು. ಮಗನು ಹುಟ್ಟಿದ್ದಕ್ಕೆ ಸಂತೋಷಪಟ್ಟರು. ಆದರೆ, ಅವನಿಗೆ ಹುಟ್ಟಿನಿಂದಲೇ ಮೂಕತನ. ಇದಕ್ಕೆ ಅವರು ತುಂಬಾ ಬಾಧೆಪಡುತ್ತಿದ್ದರು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ಬೆಳಿಗ್ಗೆ ಪಕ್ಕದ ಮನೆಯ ಬಂಧುಗಳ ಮಕ್ಕಳೊಂದಿಗೆ ಆಟವಾಡಿಕೊಂಡಿದ್ದ ಸಾಯಿಕೃಷ್ಣನು ಇದ್ದಕ್ಕಿದ್ದ ಹಾಗೆ ಮಾಯವಾದನು. ಸಮಯ ಕಳೆಯುತ್ತಿದ್ದರೂ ಅವನ ಪತ್ತೆಯಾಗಲಿಲ್ಲ. ಮಗನು ಎಲ್ಲಿಗೆ ಹೋದನೆಂದು ಅರ್ಥವಾಗದೆ ಆನಂದ ರಾವ್ ದಂಪತಿಗಳು ಅಣ್ಣತಮ್ಮಂದಿರೊಂದಿಗೆ ಸೇರಿ ಅಕ್ಕಪಕ್ಕದ ಬೀದಿಗಳಲ್ಲಿ ಹುಡುಕಿದರು. ಎಲ್ಲಿಯೂ ಕಾಣಿಸಲಿಲ್ಲ. ಮೂಕನಾದುದರಿಂದ, ಬಾಯಲ್ಲಿ ಮಾತು ಬರುವುದಿಲ್ಲ, ಏನೂ ಹೇಳಲಾರ. ಏನಾದನೋ ಎಂದು ಅವರೆಲ್ಲಾ ಆತಂಕಪಟ್ಟರು. ಊರೆಲ್ಲಾ ಹುಡುಕಿದರು, ಸಾಯಿಕೃಷ್ಣನು ಕಾಣಿಸಲಿಲ್ಲ. ಇಷ್ಟುಹೊತ್ತಿಗೆ ಮಧ್ಯಾಹ್ನ ಎರಡು ಗಂಟೆಯ ಸಮಯವಾಗುತ್ತಿದೆ. ಮಗನು ಏನಾದನೋ, ಏನಾದರೂ ತಿಂದನೋ ಇಲ್ಲೋ ಎಂದು ತಂದೆತಾಯಿಗಳಿಗೆ ಬಹಳ ಗೊಂದಲ, ಆತಂಕವಾಯಿತು. ಹಸಿವಾದರೆ ಬೇಕೆಂದು ಹೇಳಲು ಕೂಡಾ ತಿಳಿಯದು. ತುಂಬಾ ಮುಗ್ಧನಾಗಿ ಇರುತ್ತಾನೆ. ಎಲ್ಲಿ ಹೋದನೋ, ಹೇಗೆ ಇದ್ದಾನೋ ಎಂದು ತುಂಬಾ ಬಾಧೆಪಟ್ಟರು. ಆ ಊರಲ್ಲಿ ಪರಿಚಯವಿರುವ ಎಲ್ಲರಿಗೂ ಈ ವಿಷಯವನ್ನು ಹೇಳಿದರು.

ಇಷ್ಟರಲ್ಲಿ, ದೂರದಲ್ಲಿ ಒಬ್ಬ ವ್ಯಕ್ತಿಯ ಪಕ್ಕದಲ್ಲಿ ಅವನ ಕೈಹಿಡಿದುಕೊಂಡು ನಡೆದುಕೊಂಡು ಬರುತ್ತಿರುವ ಸಾಯಿಕೃಷ್ಣನು ಕಾಣಿಸಿದನು. ಆನಂದ ರಾವ್ ದಂಪತಿಗಳು ಒಂದೇ ಉಸಿರಿನಲ್ಲಿ ಅವನ ಹತ್ತಿರ ಓಡಿ, ಮಗನನ್ನು ಅಪ್ಪಿಕೊಂಡರು. ಸಾಯಿಕೃಷ್ಣನನ್ನು ಕರೆದುಕೊಂಡು ಬಂದ ವ್ಯಕ್ತಿಯೊಂದಿಗೆ ಆನಂದ ರಾವ್ ಹೀಗೆ ಹೇಳಿದನು. 'ತಂದೆಯೇ! ನಿನಗೆ ಹೇಗೆ ಕೃತಜ್ಞತೆಗಳನ್ನು ಹೇಳಬೇಕೆಂದು ತಿಳಿಯುತ್ತಿಲ್ಲ. ಈ ಹುಡುಗನು ವಾಸ್ತವವಾಗಿ ಮೂಕನು. ಬೆಳಗ್ಗಿನಿಂದ

ಎಲ್ಲಿಹೋದನೋ ಎಂದು ತಿಳಿಯದೆ ಗೊಂದಲದಲ್ಲಿದ್ದೇವೆ' ಎಂದು ಇನ್ನೂ ಏನೋ ಹೇಳಬೇಕೆಂದಿರುವಾಗ, ಆ ವ್ಯಕ್ತಿಯು ಹೀಗೆ ಹೇಳಿದನು 'ನಿಲ್ಲಿ, ನಿಲ್ಲಿ! ಈ ಹುಡುಗ ಚೆನ್ನಾಗಿ ಮಾತನಾಡುತ್ತಿರುವಾಗ, ಮೂಕನೇನು?! ಎಂದು ಕೇಳಿದನು. ಅಷ್ಟೇಅಲ್ಲ ತಾನು ಪಕ್ಕದ ಊರಿನ ಜಮೀನುದಾರನ ಮನೆಯಲ್ಲಿ ಗುಮಾಸ್ತನೆಂದು, ಜಮೀನುದಾರನು ಇಂದು ಬಹಳ ವಿಜೃಂಭಣೆಯಿಂದ 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ಮಾಡಿದನೆಂದು ಹೇಳಿದನು. ಅಲ್ಲಿ ಬಂದ ಅನೇಕಜನರೊಂದಿಗೆ ಈ ಹುಡುಗನೂ ಪ್ರಸಾದವನ್ನು ತೆಗೆದುಕೊಂಡನೆಂದು, ಆನಂತರ ತನ್ನ ಊರು, ತನ್ನ ತಂದೆತಾಯಿಯರ ಹೆಸರು ಹೇಳಿದಕ್ಕೆ, ತಾನು ಅವನನ್ನು ಹೀಗೆ ಕರೆದುಕೊಂಡು ಬಂದೆನು' ಎಂದನು. ಇದನ್ನು ಕೇಳಿದ ಆನಂದ ರಾವ್ ದಂಪತಿಗಳು ಬಹಳ ಆಶ್ಚರ್ಯಪಟ್ಟರು.

ಇಷ್ಟರಲ್ಲಿ ಸಾಯಿಕೃಷ್ಣನು ತಂದೆತಾಯಿಯೊಂದಿಗೆ ಹೀಗೆ ಹೇಳಿದನು. ‘ಅಪ್ಪ, ನಾನು ಬೇಳಿಗ್ಗೆ ಇಲ್ಲಿ ಆಟವಾಡುತ್ತಿರುವಾಗ ಒಬ್ಬ ಫಕೀರನು ಬಂದರು. ಅವರು ಎಷ್ಟು ಕಳೆಕಳೆಯಾಗಿ ಆಕರ್ಷಕನಾಗಿದ್ದನೆಂದು ತಿಳಿಯುತ್ತಿ? ನನ್ನನ್ನು ತನ್ನೊಟ್ಟಿಗೆ ಬಾರೆಂದು ಹೇಳಿದರು. ನಾನು ಏನೂ ಆಲೋಚನೆ ಮಾಡದೇ, ಯಾವ ಭಯವೂ ಇಲ್ಲದೇ ಅವರ ಹಿಂದೆ ಹೋದೆನು. ಅವರು ನನ್ನನ್ನು ಪಕ್ಕದ ಊರಿಗೆ ಕರೆದುಕೊಂಡು ಹೋಗಿ ಅಲ್ಲಿ ಜಮೀನುದಾರನ ಮನೆ ಹತ್ತಿರ ಬಿಟ್ಟು ಎಲ್ಲಿಗೋ ಹೊರಟುಹೋದರು. ಫಕೀರನುಗಾಗಿ ಆಚೆ-ಈಚೆ ನೋಡುತ್ತಿರುವಾಗ, ಅಲ್ಲಿ ಜಮೀನುದಾರನ ಗುಮಾಸ್ತನು ಯಾವುದೊ ಪ್ರಸಾದವನ್ನು ಕೊಡುತ್ತಿದ್ದರೆ, ನಾನು ಕೂಡಾ ತೆಗೆದುಕೊಂಡೆನು. ಅಷ್ಟೇ! ಅದನ್ನು ಬಾಯಲ್ಲಿ ಹಾಕಿಕೊಂಡ ಕೂಡಲೇ ನನಗೆ ಮಾತು ಬಂತು’. ಆ ಬಂದ ಫಕೀರನು ಸಾಯಿನಾಥನಲ್ಲದೇ ಬೇರೆಯಾರು ಅಲ್ಲವೆಂದು, ಆನಂದ ರಾವ್ ದಂಪತಿಗಳು ಗ್ರಹಿಸಿದರು. ತಮ್ಮನ್ನು ಅನುಗ್ರಹಿಸಿ, ತಮ್ಮ ಮಗನಿಗೆ ಮಾತನಾಡುವ ಭಾಗ್ಯ ಕೊಟ್ಟದ್ದಕ್ಕೆ ಅತ್ಯಾನಂದ ಪಟ್ಟರು. ಆವತ್ತಿನಿಂದ, ಪ್ರತಿ ಗುರುವಾರದ ದಿನ 'ಶ್ರೀ ಸಾಯಿ ರಕ್ಷಾ ವ್ರತ'ವನ್ನು ಆಚರಿಸುತ್ತಾ ಧೀರ್ಘಕಾಲ ಸುಖವಾಗಿ ಬಾಳಿದರು.

ಶ್ರೀ ಸಾಯಿನಾಥನು ಅತ್ಯಂತ ಭಕ್ತವತ್ಸಲನು. ತನ್ನನ್ನು ನಂಬಿದವರನ್ನು ನಿತ್ಯ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುವ ಅಮೃತಮೂರ್ತಿ. ಸಾಯಿನಾಥನನ್ನು ನಂಬಿದವರಿಗೆ ಯಾವುದೇ ಆಪತ್ತುಗಳು ಹತ್ತಿರ ಸುಳಿಯುವುದಿಲ್ಲ. ಕೈಹಿಡಿದ ಕೆಲಸಗಳೆಲ್ಲದರಲ್ಲಿಯೂ ಜಯವು ಉಂಟಾಗುತ್ತದೆ. ಜೀವನವು ಶುಭಪ್ರದವಾಗಿ ಮುಂದುವರಿಯುತ್ತದೆ.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ಸಮರ್ಥ ಸದ್ಗುರು ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿದೇವಾಯ ನಮಃ ||

*******

ಐದನೇ ಅಧ್ಯಾಯ

# ಬೀರಪ್ಪನ ಕಥೆ

ಪೂರ್ವಕಾಲದಲ್ಲಿ ಬೀದರ್ ಪಟ್ಟಣಕ್ಕೆ ನಲವತ್ತು ಮೈಲು ದೂರದಲ್ಲಿರುವ ಹಳ್ಳಿಯಲ್ಲಿ ಬೀರಪ್ಪನೆಂಬ ಕುರುಬನಿದ್ದನು. ಬೀರಪ್ಪನಿಗೆ ಯಾವುದೇ ವಿದ್ಯೆಯಿಲ್ಲದಿದ್ದರೂ ಬಹಳ ಸಂಸ್ಕಾರವಂತನಾಗಿ, ಒಳ್ಳೆಯ ಗುಣ, ನಡತೆಯನ್ನು ಹೊಂದಿದ್ದ. ಪ್ರತಿದಿನ ತನ್ನ ಮಾಲೀಕನಿಂದ ಕುರಿಗಳನ್ನು ಕರೆದುಕೊಂಡು ಊರ ಹೊರಗಿರುವ ಹುಲ್ಲುಹಾಸಿನ ಬಯಲುಗಳಲ್ಲಿ ಹಗಲೆಲ್ಲ ಮೇಯಿಸಿ, ಸಾಯಂಕಾಲಕ್ಕೆ ಮನೆಗೆ ಕರೆದುಕೊಂಡು ಬರುತ್ತಿದ್ದನು. ಮನೆ ಹಿಂದೆ ಇರುವ ಕೊಟ್ಟಿಗೆಯಲ್ಲಿ ಕುರಿಗಳನ್ನು ಕಟ್ಟಿ, ತನ್ನ ಮನೆಯನ್ನು ಸೇರುತ್ತಿದ್ದನು. ಪುನಃ ಮರುದಿನ ಅವುಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಿದ್ದನು. ಇದು ಅವನ ದಿನಚರಿ. ಬೀರಪ್ಪನಿಗೆ ಇನ್ನು ವಿವಾಹವಾಗಿರಲಿಲ್ಲ. ಯಜಮಾನ ಗೋವಾಂಕರ್ ಕೊಡುವ ತಿಂಗಳ ಸಂಬಳದಿಂದ ಸಮಯ ಕಳೆಯುತ್ತಿದ್ದನು.

ಬೀರಪ್ಪನ ಯಜಮಾನ ಗೋವಾಂಕರ್.ಗೆ ಇನ್ನು ಅನೇಕ ವ್ಯಾಪಾರಗಳಿತ್ತು. ಬಹಳ ಹಣ ಸಂಪಾದಿಸಿದರೂ, ಅವನಿಗೆ ಇನ್ನು ಜಿಪುಣತನ ಹೋಗಿರಲಿಲ್ಲ. ತನ್ನ ಹತ್ತಿರ ಕೆಲಸ ಮಾಡುವ ಸೇವಕರಿಗೆ ಹಬ್ಬಹರಿದಿನಗಳಲ್ಲಿ ಎರಡು ರೂಪಾಯಿಗಳನ್ನು ಕೊಡಲು ಕೂಡಾ ತುಂಬಾ ಆಲೋಚಿಸುತ್ತಿದ್ದನು. ಆದರೆ, ಪ್ರತಿ ಮಂಗಳವಾರದ ದಿನ ಹನುಮಂತನ ದೇವಾಲಯಕ್ಕೆ ಹೋಗುತ್ತಿದ್ದನು. ಪ್ರತಿ ಗುರುವಾರದ ದಿನ ಸಾಯಿ ಭಜನೆಯನ್ನು ಮಾಡುತ್ತಿದ್ದನು. ಭಜನೆಯಲ್ಲಿ ತನ್ನ ಕುಟುಂಬದವರನ್ನು ಬಿಟ್ಟು ಬೇರೆಯವರನ್ನು ಮನೆಯೊಳಗೆ ಬರಲು ಬಿಡುತ್ತಿರಲಿಲ್ಲ.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ಬೀರಪ್ಪನು ಯಾರೋ ಭಕ್ತರು ಸಾಯಿನಾಥನ ದೊಡ್ಡ ಭಾವಚಿತ್ರ ಒಂದನ್ನು ಗೋವಾಂಕರ್.ಗೆ ಬಹುಮಾನವಾಗಿ ಕೊಡಲು ತೆಗೆದುಕೊಂಡುಬರುವುದನ್ನು ನೋಡಿದನು.

ಬೀರಪ್ಪನು ಸಾಯಿನಾಥನ ಭಾವಚಿತ್ರವನ್ನು ನೋಡುವುದು ಅದೇ ಮೊದಲಸಲ. ಅಲ್ಲಿಯವರೆಗೆ ಯಾವತ್ತೂ ನೋಡಿರಲಿಲ್ಲ. ಆ ಸಾಯಿನಾಥನ ಚಿತ್ರಪಟವು ಬೀರಪ್ಪನ್ನು ಬಹಳ ಆಕರ್ಷಿಸಿತು. ಮಂದಹಾಸಪೂರ್ಣ ಆ ಸಾಯಿನಾಥನ ಚಿತ್ರವು ಬೀರಪ್ಪನ ಹೃದಯದಲ್ಲಿ ಮುದ್ರೆಯೊತ್ತಿತು. ಯಾವಾಗಲೂ ಆ ಚಿತ್ರವನ್ನೇ ಮನಸ್ಸಿನ್ನಲ್ಲಿ ನೆನೆಯುತ್ತಿದ್ದನು.

ದಿನಾಲೂ ಕುರಿಗಳನ್ನು ಮೇಯಲು ಕರೆದುಕೊಂಡು ಹೋಗುತ್ತಿದ್ದನಾದರೂ ಬೀರಪ್ಪನ ಮನಸ್ಸೆಲ್ಲಾ ಆ ಸಾಯಿನಾಥನ ಮೇಲೆಯೇ ಇತ್ತು. ಆ ಸಾಯಿನಾಥನಲ್ಲಿರುವ ಆಕರ್ಷಣೆ ಅಂಥಹುದು. ಯಾರನ್ನಾದರೂ ತನ್ನತ್ತ ಸೆಳೆಯುವ ದಿವ್ಯಮೂರ್ತಿ ಶಿರಡಿನಾಥನು. ನಂತರ ಬೀರಪ್ಪನಿಗೆ ಸ್ನೇಹಿತರ ಮುಖಾಂತರ ಸಾಯಿನಾಥನ ಬಗ್ಗೆ ತಿಳಿಯಿತು. ಅವತ್ತಿನಿಂದ ಬೀರಪ್ಪನಿಗೆ ಸಾಯಿನಾಥನ ಮೇಲೆ ಭಕ್ತಿ ಇನ್ನು ಜಾಸ್ತಿಯಾಯಿತು. ಪ್ರತಿದಿನ ಆ ಸ್ವಾಮಿಯ ಧ್ಯಾನದಲ್ಲೇ ಮುಳುಗಿ ತೇಲುತ್ತಿದ್ದನು. ಹೀಗಿರುವಾಗ, ಒಂದುದಿನ ಸಾಯಂಕಾಲ ಕುರಿಗಳನ್ನು ಕರೆದುಕೊಂಡು ಮನೆಗೆ ಬಂದನು. ಪ್ರತಿದಿನ ಯಜಮಾನ ಗೋವಾಂಕರ್ ಕುರಿಗಳನ್ನು ಲೆಕ್ಕ ಮಾಡುತ್ತಿದ್ದನು. ಆ ದಿನ ಎಷ್ಟುಸಲ ಲೆಕ್ಕ ಮಾಡಿದರೂ ಒಂದು ಕುರಿ ಕಡಿಮೆ ಇತ್ತು. ಬೀರಪ್ಪನ

ಮೇಲೆ ಗೋವಾಂಕರ್.ಗೆ ತೀವ್ರ ಕೋಪ ಉಂಟಾಯಿತು. ಬೀರಪ್ಪನನ್ನು ಜೋರಾಗಿ ಬೈದು, ಹೇಗಾದರೂ ಹುಡಿಕಿ ಆ ಕುರಿಯನ್ನು ತರಬೇಕೆಂದು ಕಳುಹಿಸಿದನು.

ಬೀರಪ್ಪನು ರಾತ್ರೆಲ್ಲ ಕತ್ತಲೆಯಲ್ಲಿ ಊರ ಹೊರಗಿನ ಬಯಲಿನಲ್ಲಿ ಹುಡುಕಿದನು. ಕಾಲಿಗೆ ಮುಳ್ಳು ಚುಚ್ಚಿ ತುಂಬಾ ನೋವಾಯಿತು. ಕತ್ತಲೆಯಲ್ಲಿ ಎಲ್ಲಿ ನಡೆಯುತ್ತಿದ್ದಾನೋ ಗೊತ್ತಾಗದೆ, ಬಹಳ ಯಾತನೆಯನ್ನು ಅನುಭವಿಸಿದನು. ಈ ಕಳೆದುಹೋದ ಕುರಿಯನ್ನು ತೆಗೆದುಕೊಂಡು ಹೋಗದಿದ್ದರೆ, ಯಜಮಾನನು ತನ್ನ ಪ್ರಾಣವನ್ನು  ಬಿಡುವುದಿಲ್ಲವೆಂದು ಭಯಪಟ್ಟನು. ರಾತ್ರಿಯೆಲ್ಲಾ ಹುಡುಕಿದರೂ ಕುರಿ ಎಲ್ಲೂ ಕಾಣಿಸಲಿಲ್ಲ. ಮುಂಜಾನೆ ಯಜಮಾನನ ಮನೆಯನ್ನು ಸೇರಿ, ಎಷ್ಟು ಹುಡುಕಿದರೂ ಕುರಿ ಸಿಗಲಿಲ್ಲವೆಂದು ಹೇಳಿದನು. ಗೋವಾಂಕರ್ ಬಹಳ ಕೋಪದಿಂದ ಉರಿಯುತ್ತಾ ಬೀರಪ್ಪನನ್ನು ಹೊಡೆದು, ಇನ್ನು ಕೆಲಸಕ್ಕೆ ಬರುವ ಅಗತ್ಯವಿಲ್ಲವೆಂದು ಹೇಳಿ ಕಳುಹಿಸಿಬಿಟ್ಟನು. ಬೀರಪ್ಪನು ದುಃಖದಿಂದ ಯಜಮಾನನನ್ನು ತುಂಬಾ ಬೇಡಿಕೊಂಡನು. ತನಗೆ ಬೇರೆ ಯಾವುದೇ ಕೆಲಸ ಬರುವುದಿಲ್ಲವೆಂದು, ಕ್ಷಮಿಸೆಂದು, ತುಂಬಾ ಮನವಿಮಾಡಿಕೊಂಡನು. ಆದರೂ ಗೋವಾಂಕರ್ ಸ್ವಲ್ಪವೂ ಕರುಣೆತೋರಿಸಲಿಲ್ಲ.

ಬೀರಪ್ಪನು ತುಂಬಾ ನೋಯುತ್ತಾ ತನ್ನ ಗುಡಿಸಲನ್ನು ಸೇರಿಕೊಂಡನು. ಈ ಕುರಿಗಳನ್ನು ಮೇಯಿಸುವುದು ಬಿಟ್ಟು ತನಗೆ ಬೇರೆ ಯಾವ ಕೆಲಸವು ಬಾರದು. ತಂದೆತಾಯಿಯನ್ನು ಚಿಕ್ಕಂದಿನಲ್ಲೇ ಕಳೆದುಕೊಂಡಿದ್ದನು. ಇನ್ನು ಯಾರು ತನ್ನನ್ನು ಪೋಷಿಸುತ್ತಾರೆ. ತನ್ನ ಜೀವನವನ್ನು ಹೇಗೆ ನಿಭಾಯಿಸುವುದೆಂದು ಬಹಳ ಬಾಧೆಪಟ್ಟನು. ಆಗ, ಬೀರಪ್ಪನಿಗೆ ಸಾಯಿನಾಥನ ಸ್ಮರಣೆ ಬಂತು. ಮನಸ್ಸಿನಲ್ಲೇ ತನ್ನ ಕಷ್ಟಗಳನ್ನೆಲ್ಲಾ ಸಾಯಿನಾಥನಿಗೆ ಮನವಿಮಾಡಿಕೊಂಡನು. ಅಮೃತಮುರ್ತಿಯಾದ ಶಿರಡಿನಾಥನು ಬೀರಪ್ಪನ ಮನವಿಯನ್ನು ಆಲಿಸಿದನು.

ಮರುದಿನದಿಂದ ಗೋವಾಂಕರ್ ವ್ಯಾಪಾರಕ್ಕೆ ಬಹಳ ಪೆಟ್ಟುಬಿತ್ತು. ಒಂದು ತಿಂಗಳಲ್ಲೇ ಬಹಳ ನಷ್ಟ ಉಂಟಾಯಿತು. ಹೀಗೆ ದಿನದಿಂದ ದಿನಕ್ಕೆ ಇಷ್ಟು ನಷ್ಟ ಯಾಕೆ ಆಗುತ್ತಿದೆಯೋ ಗೋವಾಂಕರ್.ಗೆ ಅರ್ಥವಾಗುತ್ತಿಲ್ಲ. ಇಷ್ಟರಲ್ಲಿ ಒಂದುದಿನ ಆ ಊರಿಗೆ ಎಲ್ಲಿಂದಲೋ ಒಬ್ಬ ಸಾಧುವು ಬಂದನು. ಅವನು ಬಹಳ ಮಹಿಮೆಗಳನ್ನು ಹೊಂದಿದವನೆಂದು, ಯಾವುದೇ ಸಮಸ್ಯೆಯನ್ನಾದರೂ  ಪರಿಹರಿಸುತ್ತಾನೆಂದು ಜನರು ಹೇಳುತ್ತಿದ್ದರು.  ಇದನ್ನು ಕೇಳಿ ಗೋವಾಂಕರ್, ಆ ಸಾಧುವನ್ನು ಭೇಟಿಮಾಡಿ ತನ್ನ ಸಮಸ್ಯೆಯನ್ನು ಹೇಳಿಕೊಂಡನು. ಒಂದು ತಿಂಗಳಿನಲ್ಲಿಯೇ ತನ್ನ ವ್ಯಾಪಾರವು ಯಾಕೆ ಇಷ್ಟು ನಷ್ಟಗಳ ಪಾಲಾಗುತ್ತಿದೆಯೋ ಅರ್ಥವಾಗುತ್ತಿಲ್ಲ ಎಂದನು. ಆ ಸಾಧುವು ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನಿಸಿ, ಏನೋ ತಿಳಿದವನಾಗಿ ಗೋವಾಂಕರ್.ನಿಗೆ ಹೀಗೆ ಹೇಳಿದನು. 'ತಮ್ಮಾ! ಒಂದು ತಿಂಗಳ ಹಿಂದೆ ನಿನ್ನ ಕುರಿ ಒಂದು ತಪ್ಪಿಹೋಯಿತೆಂದು, ನಿನ್ನ ಹತ್ತಿರ ಕೆಲಸಮಾಡುವ ಬೀರಪ್ಪನನ್ನು ತುಂಬಾ ಹಿಂಸಿಸಿದ್ದಿ. ಕಾರಣವಿಲ್ಲದೆ ಅವನನ್ನು ಕೆಲಸದಿಂದ ತೆಗೆದುಹಾಕಿದ್ದಿ.  ಆನಂತರ, ಎರಡುದಿನಕ್ಕೆ ನಿನ್ನ ಕುರಿ ನಿನಗೆ ಸಿಕ್ಕಿದೆ. ಆದರೂ ಈ ಸಂಗತಿಯನ್ನು ನೀನು ಯಾರಿಗೂ ಹೇಳಲಿಲ್ಲ. ಬೀರಪ್ಪನಿಗೆ ಸಾಯಿನಾಥನೆಂದರೆ ತುಂಬಾ ಪ್ರೇಮ, ಅತ್ಯಂತ ಭಕ್ತಿ. ಬೀರಪ್ಪನ್ನನ್ನು ಹಾಗೆ ಹಿಂಸಿಸಿದ್ದಕ್ಕೆ, ಸಾಯಿನಾಥನಿಗೆ ನಿನ್ನ ಮೇಲೆ ಕೋಪ ಬಂದಿದೆ. ಆದ್ದರಿಂದಲೇ ಹೀಗೆ

ಜರುಗಿದೆ. ನೀನು ತಕ್ಷಣ ಆ ಬೀರಪ್ಪನನ್ನು ಕೆಲಸಕ್ಕೆ ಸೇರಿಸಿಕೋ, ನಿನ್ನ ಸಮಸ್ಯೆಗಳೆಲ್ಲ ಪರಿಹಾರವಾಗುತ್ತದೆ' ಎಂದು ಹೇಳಿದನು.

ಈ ಮಾತುಗಳನ್ನು ಕೇಳಿದ ಗೋವಾಂಕರ್ ಆಶ್ಚರ್ಯಪಟ್ಟನು. ಕುರಿ ಮರಳಿ ದೊರಕಿದ ಸಂಗತಿ ತನ್ನನ್ನು ಬಿಟ್ಟು ಯಾರಿಗೂ ತಿಳಿಯದು. ಈ ಸಾಧುವು ತುಂಬಾ ಮಹಿಮೆಯುಳ್ಳವನೆಂದು ಭಾವಿಸಿದನು. ಮನೆಗೆ ಹೋಗಿ ಸಾಯಿನಾಥನ ಚಿತ್ರಪಟದ ಮುಂದೆ ನಿಂತುಕೊಂಡು ಸಾಯಿ ಭಕ್ತನ್ನನ್ನು ನಿಂದಿಸಿದಕ್ಕೆ ಕ್ಷಮಿಸೆಂದು ಕೆನ್ನೆಗೆ ಹೊಡೆದುಕೊಂಡನು. ಬೀರಪ್ಪನಿಗೆ ಹೇಳಿ ಕಳುಹಿಸಿ, ಅವನನ್ನು ಪುನಃ ಕೆಲಸಕ್ಕೆ ಸೇರಿಸಿಕೊಂಡನು. ಅಷ್ಟೇಅಲ್ಲ ಅವನ ಸಂಬಳವನ್ನು ದ್ವಿಗುಣಗೊಳಿಸಿದನು.  ಅವತ್ತಿನಿಂದ ಗೋವಾಂಕರ್ ಒಳ್ಳೆಯ ಜೀವನವನ್ನು ನಡೆಸುತ್ತಾ, ನಾಲ್ಕು ಜನರ ಸಹಾಯಕ್ಕೆ ಉಪಯೋಗಪಡುತ್ತಾ, ಜೀವಿಸಿದಷ್ಟು ದಿನ ಸಾಯಿನಾಥನ ಸೇವೆಯನ್ನು ಮಾಡುತ್ತಾ ಕೊನೆಗೆ ಆ ಸಾಯಿನಾಥನಲ್ಲೇ ಐಕ್ಯಹೊಂದಿದನು.

ಈ ಸಾಯಿನಾಥನಿಗೆ ತನ್ನ ಭಕ್ತರೆಂದರೆ ತುಂಬಾ ಪ್ರೇಮ, ಅನುರಾಗ. ಯಾರು ಸನ್ಮಾರ್ಗದಲ್ಲಿ ಜೀವಿಸುತ್ತಾ, ಯಾವಾಗಲೂ ತನ್ನನ್ನೇ ಸ್ಮರಿಸುತ್ತಿರುತ್ತಾರೋ ಅವರನ್ನು ನಿತ್ಯವು ರಕ್ಷಿಸುವ ಅಮೃತಮೂರ್ತಿ ಸಾಯಿನಾಥನು. ಶ್ರೀ ಸಾಯಿನಾಥನಿಂದಲೇ 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ಭಕ್ತನಿಗೆ ಅನುಗ್ರಹಿಸಿದ ಈ ವ್ರತವನ್ನು ಆಚರಿಸಿದವರಿಗೆ ಸಮಸ್ತ ಶ್ರೇಯಸ್ಸುಗಳು ಉಂಟಾಗುತ್ತದೆ. ಕೈಹಿಡಿದ ಕೆಲಸಕಾರ್ಯಗಳಲ್ಲಿ ಜಯವು ಸಿಗುತ್ತದೆ. ಸಾಕ್ಷಾತ್ ಶ್ರೀ ಸಾಯಿನಾಥನೇ ತನ್ನ ಭಕ್ತರಿಗಾಗಿ ಅನುಗ್ರಹಿಸಿದ ಈ ವ್ರತವನ್ನು ನಿತ್ಯ ಆಚರಿಸುವವರ ಜೀವನವು ಸಕಲ ಸೌಭಾಗ್ಯಗಳೊಂದಿಗೆ ಮುಂದುವರಿಯುತ್ತದೆ.

ಐದನೇ ಅಧ್ಯಾಯವು ಸಂಪೂರ್ಣವಾಯಿತು

|| ಓಂ ಸಮರ್ಥ ಸದ್ಗುರು ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿನಾಥಾಯ ನಮಃ ||

|| ಓಂ ಶ್ರೀ ಸಾಯಿದೇವಾಯ ನಮಃ ||

ಶ್ರೀ ಸಾಯಿ ರಕ್ಷಾ ವ್ರತ ಸಮಾಪ್ತಂ

*******

# ಶ್ರೀ ಶಿರಡಿಸಾಯಿ ಅಷ್ಟಕಂ

ಪತ್ರಿಗ್ರಾಮ ಸಮುದ್ಭೂತಂ ದ್ವಾರಕಾಮಾಯಿ ವಾಸಿನಂ |
ಭಕ್ತಾಭೀಷ್ಟಪ್ರದಂ ದೇವಂ ಸಾಯಿನಾಥಂ ನಮಾಮ್ಯಹಂ || 1 ||

ಮಹೋನ್ನತ ಕುಲೇಜಾತಂ ಕ್ಷೀರಾಂಬುಧಿ ಸಮುಶುಭೇ |
ದ್ವಿಜರಾಜಂ ತಮೋಘ್ನO ತಂ ಸಾಯಿನಾಥಂ ನಮಾಮ್ಯಹಂ || 2 ||

ಜಗದುದ್ಧಾರಣಾರ್ಥಂ ಯೋ ನರರೂಪಧರೋ ವಿಭುಃ |
ಯೋಗಿನಂ ಚ ಮಹಾತ್ಮಾನಂ ಸಾಯಿನಾಥಂ ನಮಾಮ್ಯಹಂ || 3 ||

ಸಾಕ್ಷಾತ್ಕಾರೇ ಜಯೇ ಲಾಭೇ ಸ್ವಾತ್ಮಾರಾಮೋ ಗುರೋರ್ಮುಖಾತ್ |
ನಿರ್ಮಲಂ ಮಮ ಗಾತ್ರಂ ಚ ಸಾಯಿನಾಥಂ ನಮಾಮ್ಯಹಂ || 4 ||

ಯಸ್ಯ ದರ್ಶನ ಮಾತ್ರೇಣ ನಶ್ಯಂತಿ ವ್ಯಾಧಿ ಕೋಟಯಃ |
ಸರ್ವೇ ಪಾಪಾಃ ಪ್ರಣಶ್ಯಂತಿ ಸಾಯಿನಾಥಂ ನಮಾಮ್ಯಹಂ || 5 ||

ನರಸಿಂಹಾದಿ ಶಿಷ್ಯಾಣಾಂ ದದೌ ಯೋನನುಗ್ರಹಂ ಗುರುಃ |
ಭವಬಂಧಾಪಹರ್ತಾರಂ ಸಾಯಿನಾಥಂ ನಮಾಮ್ಯಹಮ್ || 6 ||

ಧನಧಾನ್ಯಾನ್ ಚ ದರಿದ್ರಾನ್ಯಃ ಸಮದೃಷ್ಟ್ಯೇವ ಪಶ್ಯತಿ |
ಕರುಣಾಸಾಗರಂ ದೇವಂ ಸಾಯಿನಾಥಂ ನಮಾಮ್ಯಹಮ್ || 7 ||

ಸಮಾಧಿಸ್ಥೋಪಿ ಯೋ ಭಕ್ತ್ಯಾ ಸಮತೀರ್ಥಾರ್ಥದಾನತಃ |
ಅಚಿಂತ್ಯ ಮಹಿಮಾನಂತಂ ಸಾಯಿನಾಥಂ ನಮಾಮ್ಯಹಮ್ || 8 ||

|| ಶ್ರೀ ಶಿರಡಿಸಾಯಿ ಅಷ್ಟಕಂ ಸಂಪೂರ್ಣ ||

*******

# ಶ್ರೀ ಸಾಯಿ ಮಂಗಳ ಹಾರತಿ


ಸ್ವಾಮಿ ಸಾಯಿನಾಥಾಯ ಶಿರಡೀ ಕ್ಷೇತ್ರವಾಸಾಯ |
ಮಮಕಾಭಿಷ್ಟದಾಯ ಮಾಹಿತ ಮಂಗಳಂ || || ಸ್ವಾಮಿ ||

ಲೋಕನಾಥಾಯ ಭಕ್ತಲೋಕ ಸಂರಕ್ಷಕಾಯ |
ನಾಗಲೋಕ ಸ್ತುತ್ಯಾಯ ನವ್ಯಮಂಗಳಂ || || ಸ್ವಾಮಿ ||

ಭಕ್ತಬೃಂದ ವಂದಿತಾಯ ಬ್ರಹ್ಮಸ್ವರೂಪಾಯ |
ಮುಕ್ತಿಮಾರ್ಗ ಬೋಧಕಾಯ ಪೂಜ್ಯಮಂಗಳಂ || || ಸ್ವಾಮಿ ||

ಸತ್ಯತತ್ವ ಬೋಧಕಾಯ ಸಾಧುವೇಷಾಯತೇ |
ನಿತ್ಯಮಂಗಳದಾಯಕಾಯ ನಿತ್ಯಮಂಗಳಂ || || ಸ್ವಾಮಿ ||

******



ಓಂ ಶ್ರೀ ಅನಂತಕೋಟಿ ಅಖಂಡ ಬ್ರಹ್ಮಾಂಡ ನಾಯಕ

ರಾಜಾಧಿರಾಜ ಯೋಗಿರಾಜ ಪರಬ್ರಹ್ಮ |

ಶ್ರೀ ಸಚ್ಚಿದಾನಂದ ಸಮರ್ಥ ಸದ್ಗುರು ಸಾಯಿನಾಥ್ ಮಹಾರಾಜ್ ಕೀ ಜೈ ||

|| ಓಂ ಸಾಯಿ ಶ್ರೀ ಸಾಯಿ ಜಯಜಯ ಸಾಯಿ ||



ಸದಾ ಕಲ್ಪವೃಕ್ಷಸ್ಯ ತಸ್ಯಾಧಿ ಮೂಲೇ,
ಭವದ್ ಭಾವಬುದ್ಧ್ಯಾ ಸಪರ್ಯಾದಿ ಸೇವಾಂ
ನೃಣಾಮ್ ಕುರ್ವತಾಂ ಭಕ್ತಿ ಮುಕ್ತಿ ಪ್ರದಂತಂ
ನಮಾಮೀಶ್ವರಂ ಸದ್ಗುರುಮ್ ಸಾಯಿನಾಥಮ್ ||